# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 5 15, ಏಪ್ರಿಲ್ 1979 40 ಪೈಸೆ


## ಕೊಳಚೆ ಪ್ರದೇಶ ನಿರ್ಮೂಲನ

ವ್ಯಾಪಾರ ಮತ್ತು ಔದ್ಯಮೀಕರಣವಾದಂತೆಲ್ಲಾ ನಗರೀಕರಣವಾಗುವುದು ಸ್ವಾಭಾವಿಕ. ನಗರಗಳು ಬೆಳೆದಂತೆಲ್ಲಾ, ಒಟ್ಟಿಗೆ ಇತರ ಅನೇಕ ಸಾಮಾಜಿಕ, ನೈತಿಕ, ಮಾನವೀಯ ಸಮಸ್ಯೆಗಳೂ ಬೆಳೆದು ಬಂದಿವೆ. ನಗರಗಳು ಬೆಳೆಯುವುದು ಮತ್ತು ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆಗಳಿಗೆ ಚಾರಿತ್ರಿಕವಾಗಿ ಸಂಬಂಧವಿದೆ. ಬಂಡವಾಳಶಾಹಿ ಪದ್ಧತಿ ಬೆಳೆದಂತೆಲ್ಲಾ ಗ್ರಾಮೀಣ ಪ್ರದೇಶದಲ್ಲಿ ಬಡರೈತರೂ, ಮಧ್ಯ ರೈತರೂ ಭೂಮಿಯನ್ನು ಕಳೆಕೊಳ್ಳುತ್ತಾರೆ. ಕೂಲಿಗಾಗಿ ಮಾರಾಟ ಮಾಡಲು ಇರುವ ಶರೀರ ಶ್ರಮ ಒಂದು ಬಿಟ್ಟರೆ ಇವರಲ್ಲಿ ಬೇರೇನೂ ಸ್ವತ್ತು ಇರುವುದಿಲ್ಲ. ಭೂಮಿ ಸ್ವಲ್ಪವಾಗಿ ಇರುವ ಬಡ ಮತ್ತು ಮಧ್ಯ ರೈತರ ಕುಟುಂಬಗಳ ದುಡಿಯಲು ಸಾಧ್ಯವಿರುವ ಎಲ್ಲರಿಗೂ, ಭಾರತದಂತ ದೇಶದಲ್ಲಿ ಉದ್ಯೋಗವಿಲ್ಲ. ಅರೆಉದ್ಯೋಗ ಮತ್ತು ನಿರುದ್ಯೋಗ ಎಲ್ಲೆಡೆಗಳಲ್ಲೂ ತುಂಬಿವೆ. ನಗರಗಳಲ್ಲಾದರೆ ಔದ್ಯಮೀಕರಣ ಹೆಚ್ಚಿದಂತೆಲ್ಲಾ, ನಗರವು ಬೆಳೆದಂತೆಲ್ಲಾ ಉದ್ಯೋಗಾವಕಾಶ ಹೆಚ್ಚುತ್ತಲಿದೆ. ನಗರಗಳಲ್ಲಿ

### ಸಂಪಾದಕೀಯ

ಆಧುನಿಕೀಕರಣವನ್ನು ಬೆಳೆಸಿ, ಬಂಡವಾಳಶಾಹಿ ಪದ್ಧತಿಯ ಮನೋರಂಜನಾ ಕಾರ್ಯಕ್ರಮಗಳೂ, ಕೆಲವು ಸವಲತ್ತುಗಳೂ ಇರುವುದು ಸುಖಜೀವನ ಭ್ರಮೆಯನ್ನು ತುಂಬುತ್ತವೆ.

ಈ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಜನರು, ಮುಖ್ಯವಾಗಿ ಶ್ರಮಜೀವಿಗಳು ನಗರಗಳತ್ತ ಉದ್ಯೋಗ ಮತ್ತು ಉತ್ತಮ ಜೀವನದ ಆಸೆಯಿಂದ ವಲಸೆ ಹೋಗುತ್ತಾರೆ. ನಗರಗಳಲ್ಲಿ ಇವರನ್ನು ಬಹಳ ಅಲ್ಪ ವೇತನಕ್ಕೆ ದುಡಿಸಿ ಶೋಷಿಸಲಾಗುತ್ತಿದೆ. ಇವರಿಗೆ ಕೆಲಸ ಸಿಗುವ ಗ್ಯಾರಂಟಿ ಇಲ್ಲ; ಕೆಲಸ ಸಿಕ್ಕಿದರೂ ಕೆಲಸದ ಭದ್ರತೆಯಿಲ್ಲ. ಸಿಕ್ಕಿದ ಕೆಲಸಕ್ಕೆ ಸರಿಯಾದ ವೇತನವಿಲ್ಲ. ಉಳಕೊಳ್ಳಲು ವಸತಿ ವ್ಯವಸ್ಥೆಯಿಲ್ಲ. ಆರ್ಥಿಕ, ಸಾಮಾಜಿಕವಾಗಿ ಅತೀ ಕೆಳತಳ್ಳಲ್ಪಟ್ಟ ಜನರೇ ಹೆಚ್ಚಾಗಿರುವ, ಈ ಶ್ರಮಜೀವಿಗಳು ಕೊಳಚೆ ಪ್ರದೇಶಗಳನ್ನೇ ವಾಸಸ್ಥಳವನ್ನಾಗಿಸುತ್ತಾರೆ. ನಿಕೃಷ್ಟ ರೀತಿಯಲ್ಲಿ ಜೀವನ ಮಾಡಬೇಕಾಗುತ್ತದೆ. ರಾಜ್ಯದ ರಾಜಧಾನಿ ಬೆಂಗಳೂರು ನಗರ ಮತ್ತು ನಗರದ ಸುತ್ತಮುತ್ತ ನೂರಾರುಕೊಳಚೆ ಪ್ರದೇಶಗಳಲ್ಲಿ ಸಹಸ್ರಾರುಮಂದಿ ಈ ರೀತಿ ಜೀವಿಸುತ್ತಲಿರುವರು. ಕೆಲವೊಂದು ರಾಜಕೀಯ ಪುಡಾ

(8ನೇ ಪುಟ ನೋಡಿ)

ವಿರೋಧಪಕ್ಷದ ಮುಖಂಡರ ಮೇಲೆ ಹಲ್ಲೆ

# ಮಾರ್ಕ್ಸಿಸ್ಟ್ ಪಕ್ಷದಿಂದ ಖಂಡನೆ

ಇಂದಿರಾ ಕಾಂಗ್ರೆಸ್ಸಿಗರ ಫ್ಯಾಸಿಸ್ಟ್ ನೀತಿಗೆ ಅನುಸಾರವಾಗಿ ತಾ॥ 11-4-79ರಂದು ಬೆಳಿಗ್ಗೆ ಕಾಂಗ್ರೆಸ್ಸಿಗರಿಂದ ಮೇಲ್ಮನೆಯಲ್ಲಿ ವಿರೋಧ ಪಕ್ಷದ ಮುಂದಾಳು, ಜನತಾಪಕ್ಷದ ಎಂ.ಎಲ್.ಸಿ. ಶ್ರೀ. ಎ. ಕೆ. ಸುಬ್ಬಯ್ಯನವರ ಮನೆಯಮೇಲೆ ಧಾಳಿ ನಡೆಯಿತು. ಸುಮಾರು ನೂರೈವತ್ತು ಮಂದಿ ಕಾಂಗ್ರೆಸ್ (ಐ) ಪರವಾಗಿ ಘೋಷಣೆ ಕೂಗುತ್ತಾ ಬಂದು ಸುಬ್ಬಯ್ಯನವರು ಇಲ್ಲದಿರುವಾಗ, ಅವರ ಇಬ್ಬರು ಮಕ್ಕಳು ಮತ್ತು ಒಬ್ಬ ನೆಂಟ ಇರುವಾಗ ಮನೆ ಮೇಲೆ ಧಾಳಿ ನಡೆಸಿದರು. ಕಾರಣ, ಶ್ರೀ. ಸುಬ್ಬಯ್ಯನವರು ಬೆಂಗಳೂರಿನ ಬನಶಂಕರಿಯ ಕೊಳಚೆ ಪ್ರದೇಶದಲ್ಲಿ ಕಾಂಗ್ರೆಸ್ (ಐ) ಮುಖಂಡರು ಅದರಲ್ಲೂ ಇಂದಿರಾ ಕಾಂಗ್ರೆಸ್ ಶಾಸಕ ಶಿವಣ್ಣನವರು ಮಾಡಿದ ವಂಚನೆಯನ್ನು ಬಯಲಿಗೆಳೆದಿರುವುದು! ಮೆರವಣಿಗೆ ಕಾರರೊಂದಿಗೆ ಪೋಲೀಸ್ ವ್ಯಾನ್ ಇದ್ದರೂ, ಪೋಲೀಸರು ಗೂಂಡಾಗಿರಿಗೆ ಮೂಕ ಪ್ರೇಕ್ಷಕರಾಗಿ ನಿಂತಿದ್ದರು. ಇಂದಿರಾಗಾಂಧಿಯವರ ಬಂಧನವಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಡೆದ ಹಿಂಸಾತ್ಮಕ ಘಟನೆಗಳಿಂದ ಮೊದಲ್ಗೊಂಡು, ಶ್ರೀ. ಸುಬ್ಬಯ್ಯನವರ ಮನೆಮೇಲೆ ನಡೆಸಿದ ದಾಳಿಯವರೆಗೆ ಪೋಲೀಸರ ನಿಷ್ಕ್ರಿಯತೆ (ಇಂದಿರಾ ಕಾಂಗ್ರೆಸ್ಸಿಗರ ಪರವಾಗಿ?) ಕಂಡು ಬಂದಿದೆ. ಶ್ರೀ. ಸುಬ್ಬಯ್ಯನವರ ಮನೆ ಮೇಲೆನಡೆಸಿದ ಗೂಂಡಾಧಾಳಿಯನ್ನು, ಇಂದಿರಾ ಕಾಂಗ್ರೆಸ್ಸಿಗರ ಫ್ಯಾಸಿಸ್ಟ್ ನೀತಿಯನ್ನು ಮತ್ತು ಪೋಲೀಸರ ನಿಷ್ಕ್ರಿಯತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಇಂದಿರಾ ಕಾಂಗ್ರೆಸ್ಸಿನ ಫ್ಯಾಸಿಸ್ಟ್ ನೀತಿಯನ್ನು ವಿರೋಧಿಸಲೂ ಕರೆಯೀಯುತ್ತದೆ.

ಸೂಕ್ತ ಕ್ರಮವಹಿಸಿ ಗೂಂಡಾದಾಳಿಯನ್ನು ತಪ್ಪಿಸುವುದು ಸಾಧ್ಯವಿತ್ತಾದರೂ, ಹಾಗೆ ಮಾಡದೆ ಒದಲು ಗೂಂಡಾಧಾಳಿ ನಡೆವಾಗ ನಿಷ್ಕ್ರಿಯರಾಗಿದ್ದ ಪೋಲೀಸ್ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಲು ಸರ್ಕಾರವನ್ನು ಒತ್ತಾಯಿಸುತ್ತದೆ.

●

# ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶ

ಏಪ್ರಿಲ್ 9, 10ರಂದು ಮದರಾಸಿನಲ್ಲಿ ಸಿ.ಐ.ಟಿ.ಯು. ಆಶ್ರಯದಲ್ಲಿ ನಡೆದ ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶವು ಒಂದು ಚಾರಿತ್ರಿಕ ಘಟನೆ ಎಂದರೂ ತಪ್ಪಾಗಲಾರದು. 16 ರಾಜ್ಯಗಳಿಂದ ಬಂದ 440 ಮಹಿಳೆಯರು ತಮ್ಮ ತಮ್ಮ ಸಮಸ್ಯೆಗಳನ್ನು ಮಂಡಿಸಿದರು, ಚರ್ಚಿಸಿದರು, ಹೋರಾಟದ ಪಣತೊಟ್ಟರು.

ಅಹಲ್ಯಾರಂಗಣೇಕರ್, ಸುಶೀಲಾ ಗೋಪಾಲನ್, ಲಕ್ಷ್ಮಿಸಾಗರ್, ನಿಬಾನಿ ಸೆನ್‌ಗುಪ್ತಾ, ಮಾಣಿಕ್ಯಂ, ಕಾವೇರಿಯಮ್ಮ, ಐರಿನ್‌ಶಣ್ಮುಗಂ–ಇವರನ್ನೊಳಗೊಂಡ ಅಧ್ಯಕ್ಷಮಂಡಳಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿತು.

ಮೈಥಿಲಿಶಿವರಾಮನ್ ಅವರು ಸ್ವಾಗತ ಭಾಷಣಮಾಡಿದರು. ಸಮಾವೇಶದ ಉದ್ಘಾಟನಾ ಭಾಷಣಮಾಡಿದ ಕಾಂ. ಬಿ.ಟಿ. ರಣದಿವೆಯವರು ದುಡಿಯುವ ಮಹಿಳೆಯರ ಶೋಚನೀಯ ಸ್ಥಿತಿಯನ್ನು ವಿವರಿಸುತ್ತಾ, ಮಹಿಳೆಯರಿಗೆ ಸಮಾನ ವೇತನ ಕೊಡಬೇಕೆನ್ನುವ ಮಸೂದೆಯನ್ನು ಜಾರಿಗೆ ತರಲು ನಮ್ಮ ಸರ್ಕಾರಕ್ಕೆ 30 ವರ್ಷಗಳೇಕೆ ಬೇಕಾಯಿತು? ಎಂದು ಕೇಳಿದರು. ಅಲ್ಲದೆ 'ಕೆಲಸ ಕೊಡುವಾಗ ಮಹಿಳೆಯರಿಗೆ ಕೊನೆಯ ಸಾಲಾದರೆ, ಕೆಲಸ ಕಿತ್ತುಕೊಳ್ಳುವಾಗ ಅವರಿಗೇ ಮೊದಲ ಸ್ಥಾನ'. ಈ ಪಕ್ಷಪಾತದ ವಿರುದ್ಧ ಹೋರಾಡಲೇಬೇಕು. ಇದಕ್ಕೊಂದು ಉದಾಹರಣೆ ಕೊಡುತ್ತಾ Energy Minister ರಾಮಚಂದ್ರನ್ ಅವರ ಹೇಳಿಕೆಯೊಂದನ್ನು ತಿಳಿಸಿದರು. 'ಕಲ್ಲಿದ್ದಲ ಗಣಿಗಳಲ್ಲಿ ಕೆಲಸಮಾಡುವವರಲ್ಲಿ 50,000 ಜನರನ್ನು ಕೆಲಸದಿಂದ ತೆಗೆದುಹಾಕಬೇಕಾಗಿದೆ. ಇವರಲ್ಲಿ ಹೆಚ್ಚಿನವರು ಹೆಂಗಸರೇ ಆಗಿರಲಿ. ಗಂಡಸರನ್ನು ಕೆಲಸದಿಂದ ಕಿತ್ತುಹಾಕಿದರೆ, ಅವರಿಗೆ ಬದಲಿ ಉದ್ಯೋಗ ಕೊಡಬೇಕು. ಅದೇ ಹೆಂಗಸರಿಗಾದರೆ ಬೇರೆ ಉದ್ಯೋಗ ಕೊಡಬೇಕಾಗಿಲ್ಲ'. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಮಂತ್ರಿ ಮಹಾಶಯರು ಸೂಚಿಸಿದ ಉಪಾಯ ಇದು! ಎಂದು ಹೇಳಿದರು.

'ಮಾಲೀಕರನ್ನು, ಸರಕಾರವನ್ನಷ್ಟೇ ದೂಷಿಸುವುದಲ್ಲದೆ ಸ್ವವಿಮರ್ಶೆಯನ್ನೂ ಮಾಡಿಕೊಳ್ಳಬೇಕು' ಎಂದು ಹೇಳಿದ ರಣದಿವೆಯವರು ಕಾರ್ಮಿಕಸಂಘಗಳಲ್ಲಿ ಮಹಿಳೆಯರಿಗೆ ಎಷ್ಟು ಸ್ಥಾನಗಳು ಸಿಕ್ಕಿವೆ ಎಂದು ಪ್ರಶ್ನಿಸಿದರು. ಕಾರ್ಮಿಕ ಸಂಘಗಳಲ್ಲಿ ನಾಲ್ಕೂವರೆಲಕ್ಷ ಸದಸ್ಯತ್ವ ಇದ್ದರು ಈಗ ಎರಡೂವರೆಗೆ ಇಳಿದಿದೆ. ಇದಕ್ಕೆ ನಮ್ಮ ಕಾರ್ಮಿಕ ಸಂಘಗಳ ಮುಖಂಡರ ಧೋರಣೆ ಕಾರಣ ಎಂದ ಅವರು ಇದಕ್ಕೆ ಸಿ.ಐ.ಟಿ.ಯು. ಚಿಕಿತ್ಸೆ ಹುಡುಕುತ್ತಿದೆ ಎಂದರು. ಮುಂದುವರೆದ ರಾಷ್ಟ್ರಗಳೆನಿಸಿಕೊಂಡಿರುವ ಇಂಗ್ಲೆಂಡ್–ಅಮೆರಿಕಗಳಲ್ಲಿಯೂ ಗಂಡಸರ ಧೋರಣೆ ಇದಕ್ಕಿಂತ ಭಿನ್ನವಲ್ಲ. ಎಂದಿನವರೆಗೆ ಅಧಿಕಾರ ಕೇಂದ್ರೀಕೃತವಾಗಿರುವುದೋ ಅಲ್ಲಿಯವರೆಗೆ ದುಡಿಯುವ ವರ್ಗಕ್ಕೆ ಶೋಷಣೆ ತಪ್ಪಿದ್ದಲ್ಲ. ದುಡಿಯುವ ವರ್ಗದ ಕೈಗೆ ಅಧಿಕಾರ ಬರಿದರೆ ಮಾತ್ರ ಇದಕ್ಕೆ ಪರಿಹಾರ ಸಾಧ್ಯ ಎಂದು ರಣದಿವೆ ಹೇಳಿದರು. ದುಡಿಯುವ ಮಹಿಳೆಯರ ಹೋರಾಟ ದುಡಿಯುವ ವರ್ಗಗಳ ಹೋರಾಟದ ಅಂಗವಾಗಿ ಬೆಳೆಯಬೇಕು.

ಎರಡು ದಿನದ ಉತ್ಸಾಹಪೂರ್ಣ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ ಸುಮಾರು 45 ಪ್ರತಿನಿಧಿಗಳು ತಮ್ಮ ತಮ್ಮ ವೃತ್ತಿಗಳಲ್ಲಿನ ಸಮಸ್ಯೆಗಳನ್ನು ತೋಡಿಕೊಂಡರು. ಇವರಲ್ಲಿ ಅನೇಕರು ಸಿ.ಐ.ಟಿ.ಯು.ಗೆ ಸೇರಿಲ್ಲದ ಸಂಘ–ಸಂಸ್ಥೆಗಳನ್ನು ಪ್ರತಿನಿಧಿಸಿದ್ದರು. ಸಿ.ಐ.ಟಿ.ಯು.ವಿನ ಈ ಬೃಹತ್ ಹೋರಾಟಕ್ಕೆ ಬೆಂಬಲ ಸೂಚಿಸಿದ ಅವರು ಈ ಸಂಘಟನಾ ನಾಂದಿಗೆ ಅಭಿನಂದನೆ ಸಲ್ಲಿಸಿದ್ದರು. ಇವರಲ್ಲಿ ನರ್ಸ್‌ಗಳು, ಶಿಕ್ಷಕಿಯರು, ಕಟ್ಟಡ ನಿರ್ಮಾಣ, ಭಾರ ಹೊರುವ, ಕೃಷಿ ಕೂಲಿಗಾರರು, ಔಷಧಿ ತಯಾರಿಕಾಸಂಸ್ಥೆ, ಟೆಲಿಫೋನ್ ಆಪರೇಟರ್ಸ್, ಗಣಿ ಕೆಲಸಗಾರರು, ವೈದ್ಯ, ಬ್ಯಾಂಕ್, ಟೀ, ಸೆಣಬು, ಬೀಡಿ, ಗೋಡಂಬಿ ಕಾರ್ಖಾನೆ ಇವೇ ಮುಂತಾದವರಿದ್ದರು.

ಮೊದಲದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸತ್ ಸದಸ್ಯೆ ಅಹಲ್ಯಾರಂಗಣೇಕರ್ ಅವರು ಇತಿಹಾಸದ ಒಂದು ಮಹತ್ವಪೂರ್ಣ ಘಟ್ಟದಲ್ಲಿ ನಾವು ಸೇರಿದ್ದೇವೆ ಎಂದರು. ದೆಹಲಿಯಲ್ಲಿ ಇತ್ತೀಚೆಗೆ ಶಿಕ್ಷಕಿಯರು ಮುಷ್ಕರ ನಡೆಸಿದಾಗ ಅವರನ್ನು ಒಂದು ತಿಂಗಳು ಸೆರೆಮನೆಯಲ್ಲಿ ಇರಿಸಿದ್ದನ್ನು ಪ್ರಸ್ತಾಪಿಸಿದ ಅವರು ಈಗ ನಮ್ಮ ಸರಕಾರ ಮಸೂದೆ ಮೂಲಕ ಶಿಕ್ಷಕಿಯರ, ನರ್ಸ್‌ಗಳ ಮುಷ್ಕರ ಹೂಡುವ ಹಕ್ಕನ್ನೇ ಕಿತ್ತುಕೊಳ್ಳುವ ಯತ್ನದಲ್ಲಿದೆ ಎಂದು ಹೇಳಿ ಇದೇನಾ ನಮ್ಮ ಪ್ರಜಾಪ್ರಭುತ್ವ ಎಂದು ಪ್ರಶ್ನಿಸಿದರು. 1911ರಲ್ಲಿ ದುಡಿಯುವ ಜನರ ಪ್ರತಿ ಸಾವಿರಕ್ಕೆ 521 ಮಹಿಳೆಯರಿದ್ದರು. ಈಗ, 1971ರಲ್ಲಿ ಮಹಿಳೆಯರ ಸಂಖ್ಯೆ 210 ಎಂದು ಅಂಕಿ–ಅಂಶ ಇತ್ತ ಅವರು, ಈ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದರು. ಹತ್ತಿ ಗಿರಣಿಗಳನ್ನು ಉದಾಹರಿಸುತ್ತಾ, ಯಂತ್ರಗಳ ಬಳಕೆ ಹೆಚ್ಚಾದಾಗ ಅಧಿಕ ಸಂಖ್ಯೆಯಲ್ಲಿ ಹೆಂಗಸರೇ ಏಕೆ ಕೆಲಸ ಕಳೆದುಕೊಳ್ಳುತ್ತಿದ್ದಾರೆ? ದುಡಿಯುವ ಮಹಿಳೆಯರಲ್ಲಿ ಶೇಕಡಾ 89ರಷ್ಟು ಮಹಿಳೆಯರೇ ಏಕಿದ್ದಾರೆ? ಆಯಾ-ನರ್ಸ್‌ಗಳ ಕೆಲಸವನ್ನು ಹೆಚ್ಚಿನ ಸಂಖ್ಯೆ ಹೆಂಗಸರೇ ಮಾಡುತ್ತಿದ್ದು ಇದನ್ನು ಗಂಡಸರಿಗೆ ಮಾಡಲು ಸಾಧ್ಯವಿಲ್ಲವೆ? ರಸಾಯನಿಕ ವಸ್ತು ತಯಾರಿಕೆಯಲ್ಲಿ ಬಾಟ್ಲಿ ತೊಳೆಯುವ ಮತ್ತು ಬಾಟ್ಲಿಗಳಲ್ಲಿ ತುಂಬುವ ಕೆಲಸಗಳಲ್ಲಿ ಹೆಂಗಸರು ಮಾತ್ರವೇಕೆ? ಟೆಲಿಫೋನ್ ಆಪರೇಟರುಗಳಲ್ಲಿ 'ಗಂಟೆ ವೇತನ' ನೀಡುವ ಪದ್ಧತಿಯನ್ನು ಮಹಿಳಾ ಆಪರೇಟರುಗಳ ಮೇಲೆ ಮಾತ್ರ ಏಕೆ ಹೇರಲಾಗುತ್ತಿದೆ? ಎಂದು ಅಹಲ್ಯಾ ಪ್ರಶ್ನಿಸಿದರು.

ಹೆರಿಗೆಭತ್ಯದ ಕಾನೂನು ಮಾಡಿರುವ ನಮ್ಮ ಸರಕಾರ ಅದನ್ನು ಉಲ್ಲಂಘಿಸಿದ ಯಾವ ಮಾಲೀಕನಿಗೂ ಈವರೆಗೆ ಯಾವುದೇ ಶಿಕ್ಷೆ ವಿಧಿಸಿಲ್ಲ. ಈ ಬಗ್ಗೆ ಕಳೆದ ಮೂರು ವರ್ಷಗಳಿಂದ ನ್ಯಾಯಾಲಯದಲ್ಲಿ ಕೊಳೆಯುತ್ತಿರುವ ಪ್ರಕರಣಗಳ ಸಂಖ್ಯೆ 417. ಈವರೆಗೆ ಮೂರು ಪ್ರಕರಣಗಳ ಬಗ್ಗೆ ಮಾತ್ರ ನ್ಯಾಯ ನೀಡಲಾಗಿದ್ದರೂ ಯಾವ

[[illegible]ನೇ ಪುಟ ನೋಡಿ]

# ಎರಡು ಸಮ್ಮೇಳನಗಳು, ಎರಡು ಉದ್ದೇಶಗಳು

"ದಿಲ್ಲಿಯಲ್ಲಿ ಚರಣಸಿಂಗರ ನೇತೃತ್ವದಲ್ಲಿಯೂ ರೈತರನ್ನು ಲಕ್ಷಗಟ್ಟಲೆಯಲ್ಲಿ ಸಭೆಸೇರಿಸಲಾಗಿತ್ತು. ಆದರೆ, ಯಾವ ಉದ್ದೇಶಕ್ಕಾಗಿ? ಶ್ರೀ ಚರಣಸಿಂಗರನ್ನು ಉಪಪ್ರಧಾನಿ ಸ್ಥಾನಕ್ಕೆ ಏರಿಸುವ ಸಲುವಾಗಿ. ವಾರಣಾಸಿಯಲ್ಲೂ ಅಖಿಲ ಭಾರತ ಕಿಸಾನ್ ಸಂಘದ ಆಶ್ರಯದಲ್ಲಿ ರೈತರು ಲಕ್ಷಾಂತರ ಸಂಖ್ಯೆಯಲ್ಲಿ ಸಭೆ ಸೇರಿದ್ದರು. ಯಾವ ಉದ್ದೇಶಕ್ಕಾಗಿ? ಭಾರತದಾದ್ಯಂತದ ರೈತರನ್ನೂ ಕೃಷಿ ಕೂಲಿಗಾರರನ್ನೂ ಸಂಘಟನೆಯಡಿಯಲ್ಲಿ ತಂದು ಅವರ ಮತ್ತು ದೇಶದ ಪ್ರಶ್ನೆಗಳಿಗೆ ಮೂಲಭೂತ ಪರಿಹಾರ ಹುಡುಕುವ ಸಲುವಾಗಿ ಎರಡು ಸಮ್ಮೇಳನಗಳು, ಎರಡು ಉದ್ದೇಶಗಳು- ಇದನ್ನು ಜನತೆ ಸ್ಪಷ್ಟವಾಗಿ ತಿಳಿದಿರುವುದು ಅಗತ್ಯ" ಎಂದು ಮಿಲಿಯಾಂತರ ಸಂಖ್ಯೆಯಲ್ಲಿ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭೆಯ ಉಪಾಧ್ಯಕ್ಷರಾದ ಕಾಂ. ಸುರಜಿತ್‌ಸಿಂಗರು ವಿನಂತಿಸಿಕೊಂಡರು.

ಮಾರ್ಚ್ 30, 31 ಮತ್ತು ಏಪ್ರಿಲ್ 1 ರಂದು ಅಖಿಲ ಭಾರತ ಕಿಸಾನ್ ಸಭೆಯು ಉತ್ತರಪ್ರದೇಶದ ವಾರಣಾಸಿಯಲ್ಲಿ ತನ್ನ 23ನೇ ರಾಷ್ಟ್ರೀಯ ಅಧಿವೇಶನವನ್ನು ನಡೆಸಿತು. ದೇಶದ ಎಲ್ಲಾ ರಾಜ್ಯಗಳಿಂದ 1200 ಪ್ರತಿನಿಧಿಗಳು ವಾರಣಾಸಿಯ ಅಲಂಕೃತ ಟೌನ್‌ಹಾಲಿನಲ್ಲಿ 3 ದಿನಕಾಲ ಕಾಂ. ಸುರಜಿತ್‌ಸಿಂಗರು ಅರ್ಪಿಸಿದ ವರದಿಯನ್ನು ಚರ್ಚಿಸಿ 125 ಮಂದಿಯುಳ್ಳ ಅಖಿಲ ಭಾರತ ಕಿಸಾನ್ ಕೌನ್ಸಿಲನ್ನೂ, 35 ಮಂದಿಯುಳ್ಳ ಕೇಂದ್ರ ಕಿಸಾನ್ ಸಮಿತಿಯನ್ನೂ ಆರಿಸಿತು.

ಪಶ್ಚಿಮ ಬಂಗಾಳದ ಸಂಯುಕ್ತ ರಂಗ ಸರಕಾರದ ರೆವೆನ್ಯೂ ಮಂತ್ರಿಗಳೂ, ಪಶ್ಚಿಮ ಬಂಗಾಳದ ಪ್ರಮುಖ ರೈತ ಮುಖಂಡರೂ ಆಗಿರುವ ಕಾಂ. ಬಿನೋಯ್ ಚೌಧರಿಯವರನ್ನು ಸಮ್ಮೇಳನವು ಸರ್ವಾನುಮತದಿಂದ ಅಖಿಲ ಭಾರತ ಕಿಸಾನ್ ಸಭೆಯ ಅಧ್ಯಕ್ಷರನ್ನಾಗಿಯೂ, ಕೇರಳದ ಕೃಷಿಕೂಲಿಗಾರರ ಮತ್ತು ರೈತರ ಶ್ರೇಷ್ಠ ಮುಖಂಡರೂ ಸಾಹಿತಿಗಳೂ ಆದ ಕಾಂ. ಚಾತುಣ್ಣಿ ಮಾಸ್ಟರ್ ಇವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು. ಕಾಂ. ಸುರಜಿತ್ ಸಿಂಗರನ್ನು ಉಪಾಧ್ಯಕ್ಷರಾಗಿಯೂ ಚುನಾಯಿಸಲಾಯಿತು.

ಧ್ವಜಾರೋಹಣವನ್ನು ಮಾಡಿದ ಮಹಾರಾಷ್ಟ್ರದ ಆದಿವಾಸಿ ರೈತ ಮಹಾ ಮುಖಂಡರಾದ ಕಾಂ. ಗೋದಾವರಿ ಪರುಳೇಕರರು "ಈ ಧ್ವಜವು ಸಹಸ್ರಾರು ಹುತಾತ್ಮರು ತೆಲಂಗಾನ, ತೆಬಾಗ್, ಪುನಪುರವಯಲಾರ್, ಕೈಯೂರ್ ಮೊದಲಾದ ಹೋರಾಟಗಳಲ್ಲಿ ರೈತರಿಗಾಗಿ ಕೃಷಿಕೂಲಿಗಾರರಿಗಾಗಿ ಆದಿವಾಸಿಗಳಿಗಾಗಿ ಹುತಾತ್ಮರಿಂದ ರಕ್ತಸಿಕ್ತವಾಗಿದೆ. ಸಹಸ್ರಾರು ಮಂದಿ ಬಂಗಾಳ, ತ್ರಿಪುರ, ಕೇರಳ, ಪಂಜಾಬ್, ಆಂಧ್ರ, ದೇಶಗಳಲ್ಲಿ ಪ್ರಜಾಪ್ರಭುತ್ವ ಹಕ್ಕುಗಳು ದುಡಿಯುವ ಜನತೆಯ ಸಂಘಟಿತ ಮುನ್ನಡೆಗೆ ಅವಶ್ಯಕವೆಂದು ಹೋರಾಡಿ ಸರ್ವತ್ಯಾಗ ಮಾಡಿದ ಸಂಕೇತದ ಬಾವುಟ. ಈ ಬಾವುಟದಡಿ ನಾವು ಈ ಹುತಾತ್ಮರು ಈ ತ್ಯಾಗಿಗಳು ಹೋರಾಡಿದ ಉದ್ದೇಶವನ್ನು ಸಫಲಗೊಳಿಸಲು ಮುನ್ನಡೆಯೋಣ" ಎಂದು ಕರೆಕೊಟ್ಟರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಪ್ರಧಾನಕಾರ್ಯದರ್ಶಿಯವರು ಅಧಿವೇಶನವನ್ನು ಅಭಿನಂದಿಸಿ ಮಾತಾಡುತ್ತಾ "ದೇಶದ ರೈತರು ಹಿಂದೆ 1936ರಲ್ಲಿ ಇದೇ ಉತ್ತರಪ್ರದೇಶದಲ್ಲಿ ಸಭೆ ಸೇರಿ 'ಸಾಮ್ರಾಜ್ಯಶಾಹಿ ವಿರೋಧಿ ವೇದಿಕೆ'ಯನ್ನು ಬಲಪಡಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರೋಧಿ ಚಳವಳಿಗೆ ಸತ್ವ ಬರುವ ಹಾಗೆ ಹೋರಾಡಿದ್ದರು.......ಅದೇ ವಿಧದ ಇನ್ನೊಂದು ಮಹತ್‌ಪೂರ್ವ ಸಂದರ್ಭ ಇದೀಗ ದೇಶದ ರಾಜಕೀಯದಲ್ಲಿ ಕಾಂಗ್ರೆಸೂ ಅಲ್ಲ, ಜನತಾವೂ ಅಲ್ಲ, ಬೇರೆಯೇ ದಾರಿಯನ್ನು ಅನುಸರಿಸುತ್ತಾ ಮುನ್ನಡೆಯುವ ಎಡಪ್ರಜಾಪ್ರಭುತ್ವ ಶಕ್ತಿಗಳ ಕೂಟವೊಂದನ್ನು ರಚಿಸುವ ಸಂದರ್ಭ ಒದಗಿಬರುತ್ತಿದೆ. ನೀವು ದೇಶದ ರೈತರು ಈ ಕೂಟವನ್ನು ಸತ್ವಪೂರ್ಣಗೊಳಿಸಲು ಮುಂದಾಗಬೇಕು." ಎಂದು ಹಾರೈಸಿದರು. "ಉತ್ತರಪ್ರದೇಶದ ರಾಜಕೀಯವಾಗಲೀ, ಮಹಾರಾಷ್ಟ್ರದ ರಾಜಕೀಯವಾಗಲೀ, ಜನಾತಾದ ಅಖಿಲಭಾರತ ಕತೆಯಾಗಲೀ ಹೊಸ ರಾಜಕೀಯ ಶಕ್ತಿಗಳು ಒಟ್ಟಾಗುವುದಕ್ಕೆ- ಎಲ್ಲಾ ಪುರೋಗಾಮೀ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳು ಒಟ್ಟಾಗಿ ಮುನ್ನಡೆಯುವುದಕ್ಕೆ ಬಹಳ ಅನುಕೂಲಕರವಾಗಿದೆ" ಎಂದು ಅವರು ಉದಾಹರಣೆ ಸಹಿತ ವಿವರಿಸಿದರು.

ಪ್ರಧಾನ ಕಾರ್ಯದರ್ಶಿಯವರ ವರದಿಯ ಮುಖ್ಯ ಸಾರಾಂಶಗಳು ಹೀಗಿವೆ: "30 ವರ್ಷಗಳ ಕಾಂಗ್ರೆಸ್ಸು ಆಡಳಿತೆ, 2 ವರ್ಷಗಳ ಜನತಾ ಆಡಳಿತೆಯು ದೇಶದಲ್ಲಿ ಭೂ-ಕೇಂದ್ರೀಕರಣವನ್ನು ಕಡಿಮೆಮಾಡಲಿಲ್ಲ; ಬಡತನವನ್ನು ಹೋಗಲಾಡಿಸಲಿಲ್ಲ; ನಿರುದ್ಯೋಗವನ್ನು ಹಿಡಿತದಲ್ಲಿ ತರಲಿಲ್ಲ...ರೈತರ ಯಾವುದೇ ಮೂಲಭೂತ ಪ್ರಶ್ನೆಯನ್ನು ಬಗೆಹರಿಸಲಿಲ್ಲ...

"20 ವರ್ಷಗಳ ಹಿಂದೆ ಮೇಲಿನ 5 ಶೇಕಡಾ ಮಂದಿ 35 ಶೇಕಡಾ ಕೃಷಿಭೂಮಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಎಲ್ಲಾ ತರದ 'ತೀವ್ರ ಭೂಸುಧಾರಣೆಗಳ' ನಂತರ ಈಗ ಮೇಲಿನ 4 ಶೇಕಡಾ ಮಂದಿ 31 ಶೇಕಡಾ ಕೃಷಿಭೂಮಿಯನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. 70 ಶೇಕಡಾ ರೈತರ ಕೈಯಲ್ಲಿ 1 ಎಕರೆಯಷ್ಟು ಭೂಮಿಯು ಇರುವುದಿಲ್ಲ. ಒಂದೆಡೆ ಮೇಲಿನ 10 ಮಂದಿಗೆ ರೂ. 50000ಕ್ಕಿಂತಲೂ ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕ ವರಮಾನ ಸಿಗುತ್ತಿರುವಾಗ ನೂರಕ್ಕೆ 90 ಮಂದಿಗೆ ರೂ. 1000 ದಷ್ಟೂ ವರಮಾನ ಸಿಗುತ್ತಿಲ್ಲ. ಕೃಷಿಕೂಲಿಗಾರರಿಗೆ ಯಾವುದೇ ಕನಿಷ್ಠಕೂಲಿ ಜಾರಿಯಾಗಲಿಲ್ಲ (ಕೇರಳ ಮತ್ತು ಬಂಗಾಳದಲ್ಲಿ ರೂ 8 ಜಾರಿಯಲ್ಲಿದೆ) ಕೇವಲ 100-150 ದಿನ ಕೆಲಸ ದೊರೆಯುತ್ತಿದೆ. ಹೊಸದಾಗಿ ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವವರಲ್ಲಿ ಕೇವಲ 10-11 ಶೇಕಡಾ ಮಂದಿಗೆ ಮಾತ್ರ ಉದ್ಯೋಗ ದೊರೆಯುತ್ತಿದೆ.

"ಕೃಷಿಕರನ್ನೆಲ್ಲಾ ಬಾಧಿಸುತ್ತಿರುವ ಅತಿ ದೊಡ್ಡ ಪ್ರಶ್ನೆ ಎಂದರೆ ಕೃಷಿಕನು ಬೆಳೆಸಿದ ಯಾವುದೇ ಬೆಳೆಗೆ- ಅದು ಸೆಣಬಾಗಲಿ, ತಂಬಾಕಾಗಲಿ, ಅದು ಭತ್ತವಾಗಲಿ, ಅದು ಗೋದಿಯಾಗಲಿ, ಅದು ಹತ್ತಿಯಾಗಲಿ, ಕಬ್ಬಾಗಲಿ- ಉತ್ಪಾದನೆ ಮಾಡುವ ಖರ್ಚುಕೂಡಾ ಮಾರಾಟಮಾಡಿ ಹುಟ್ಟುವುದಿಲ್ಲ. ಬೆಲೆಗಳು ಸಾರ್ವತ್ರಿಕವಾಗಿ ಕುಸಿದಿದೆ. ಅದೇ ರೈತನು ಕೃಷಿಗೆ ಹಾಕುವ ಕೈಗಾರಿಕಾವಸ್ತುಗಳ ಬೆಲೆ ಒಂದಕ್ಕೆರಡರಷ್ಟು ಏರಿದೆ....

"ಸರಕಾರದ ಟೇಕ್ಸ್ ನೀತಿಯು ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ತೀರಾ ಬಾಧಕವಾಗಿದೆ. ಸರಿಯಾದ ದರದಲ್ಲಿ ರಿಯಾಯಿತಿ ಸಿಕ್ಕಿದರೆ ಡೀಸೆಲ್‌ಕ್ರಯವೇರಿ ರೈತರಿಗೆ ನಾಲ್ಕುಪಾಲು ಖರ್ಚು ಹೆಚ್ಚಿದೆ. ಸೀಮೆಎಣ್ಣೆಗೆ ಬೆಲೆ ಏರಿಸಿ ಎಲ್ಲಾ ಜನರಿಗೂ ತುಂಬಾ ಉಪದ್ರವ ಕೊಟ್ಟಂತಾಗಿದೆ".

"ಅಖಿಲಭಾರತ ರೈತಸಂಘವು ತನ್ನ ಮುಖ್ಯ ನ್ಯೂನತೆಗಳನ್ನು–ಅಸಮಾನ ಬೆಳವಣಿಗೆ, ಬಲಹೀನವಾದ ಕಡೆಗಳಲ್ಲಿ ಎಲ್ಲಾ ಪ್ರಶ್ನೆಗಳನ್ನು ಎತ್ತಿ ರೈತರ ಮಧ್ಯೆ ಮುತುವರ್ಜಿ ವಹಿಸಿ ಕೆಲಸ ಮಾಡದಿರುವುದು, ರೈತ ಸಮಿತಿಗಳನ್ನು ಗ್ರಾಮಗಳಲ್ಲಿ ನಡೆಸಿ ರೈತರ ಎಲ್ಲಾ ಪ್ರಶ್ನೆಗಳಿಗೆ ಗಮನಕೊಟ್ಟು ರೈತರನ್ನು ಸಂಘಟಿತರಾಗಿ ಈ ಪ್ರಶ್ನೆಗಳ ಪರಿಹಾರಕ್ಕಾಗಿ ಹೋರಾಟದಲ್ಲಿ ಇಳಿಸುವುದು– ಆದಷ್ಟು ಬೇಗನೇ ಹೋಗಲಾಡಿಸಿದರೆ, ಕೃಷಿಕೂಲಿಗಾರರ ಮತ್ತು ಬಡರೈತರ ಹೋರಾಟಗಳನ್ನು ಪರಸ್ಪರ ಹೊಂದಾಣಿಕೆಮಾಡಿ ನಡೆಸಿದರೆ, ಮುಂದಿನ ಕೆಲವೇ ವರ್ಷಗಳಲ್ಲಿ ರೈತರ ಮುನ್ನಡೆ ಮಾತ್ರವಲ್ಲ ದೇಶದ ರಾಜಕೀಯ ವಾತಾವರಣದಲ್ಲೇ ಬದಲಾವಣೆಯನ್ನು ಸಾಧಿಸಲು ಸಾಧ್ಯ".

ನೂತನ ಅಧ್ಯಕ್ಷರಾದ ಬಿನೋಯ್ ಚೌಧರಿಯವರು ಅಧ್ಯಕ್ಷತೆಯನ್ನು ವಹಿಸುವಾಗ ನುಡಿದ ಕೆಲವು ಮಾತುಗಳು ಗಮನಾರ್ಹ: ಕಾಂ. ಎ. ಕೆ. ಜಿ. ಯವರು ಎರಡು ದಶಕಗಳ ಕಾಲ ಅಲಂಕರಿಸಿದ ಸ್ಥಾನವನ್ನು ನಾನು ವಹಿಸಬೇಕೆಂದು ನೀವು ಹೇಳಿದ್ದೀರಿ. ಅದು ಹೇಗೆ ಸಾಧ್ಯ? ಆದರೂ ನಿಮ್ಮೆಲ್ಲರ ಸಹಾಯದಿಂದ ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಯತ್ನಿಸುತ್ತೇನೆ. ಪಶ್ಚಿಮಬಂಗಾಳದಲ್ಲಿ ನಾವು ಪಡೆದ ಅನುಭವವು ದೇಶದ ಎಲ್ಲಾ ರೈತರಿಗೆ ಸಿಗುವಂತೆಮಾಡಿ ದೇಶದಾದ್ಯಂತವು ರೈತರ ಚಳುವಳಿಯು ಪಶ್ಚಿಮ ಬಂಗಾಳದಂತೆ ಮುಂದುವರಿಯುವುದಕ್ಕೆ ಸಹಾಯಕವಾಗಲಿ ಎಂದು ಹಾರೈಸುತ್ತೇನೆ" ಎಂದು ಅವರು ಮಾರ್ಮಿಕವಾಗಿ ನುಡಿದರು. 400 ಹೆಚ್ಚು ಕ್ರಿಯಾಶೀಲ ರೈತ ಮುಂದಾಳುಗಳನ್ನು ಬಲಿದಾನತೆತ್ತು, 1979ರ ಸಾಲಿಗೆ 27 ಲಕ್ಷ ರೈತರನ್ನು ಅಖಿಲಭಾರತ ಕಿಸಾನ್ ಸಭೆಯಲ್ಲಿ ಸದಸ್ಯರನ್ನಾಗಿ ನೋಂದಾಯಿಸಿದ ಪಶ್ಚಿಮ ಬಂಗಾಳದ ರೈತಸಂಘದ ಮಾರ್ಗವು ನಿಜವಾಗಿ ಅನುಕರಣೀಯವಲ್ಲವೇ ?

25 ಮಂದಿ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು.

ಪಶ್ಚಿಮ ಏಸಿಯಾ, ವಿಯೆಟ್‌ನಾಮ್–ಚೈನಾ ಘರ್ಷಣೆ, ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಸಿಗಬೇಕು, ಭೂ–ಸುಧಾರಣೆ, ಕೃಷಿಕೂಲಿಗಾರರ ಕನಿಷ್ಟ ಕೂಲಿ ಇವೇ ಮೊದಲಾದ 21 ಠರಾವುಗಳನ್ನು ಹಲವು ತಿದ್ದುಪಡಿಗಳೊಂದಿಗೆ ಅಧಿವೇಶನವು ಅಂಗೀಕರಿಸಿತು. ವಿಯೆಟ್‌ನಾಮ್–ಚೈನಾ ಘರ್ಷಣೆಯ ಕುರಿತಾದ ಠರಾವಿನ ಕುರಿತು ಮಾತನಾಡಿದ ಕಾಂ. ಬಸವಪುನ್ನಯ್ಯನವರು "ಒಂದು ರಾಷ್ಟ್ರಕ್ಕೆ ಬುದ್ಧಿ ಕಲಿಸುವ ದೃಷ್ಟಿಯಿಂದ ಆದೇಶದ ಗಡಿಗಳೊಳಗೆ ಸೈನ್ಯಗಳನ್ನು ಕಳುಹಿಸುವುದು ಅತ್ಯಂತ ಅರ್ಥಹೀನವಾದ ಮತ್ತು ಉದ್ಧಟತನದ ನೀತಿ. ಮಾರ್ಕ್ಸ್‌ವಾದ–ಲೆನಿನ್‌ವಾದದ ಎಲ್ಲಾ ತತ್ವಗಳಿಗೂ ತದ್ವಿರುದ್ಧವಾದ ನಿಯಮ ಇದು. ಚೈನಾವು ಇಂದು 3 ಜಗತ್ತುಗಳೆಂಬ ತನ್ನ ವಿದೇಶಿ ಧೋರಣೆಯನ್ನು ಅನುಸರಿಸುವ ಮೂಲಕ ಸಾಮ್ರಾಜ್ಯಶಾಹಿಗಳನ್ನು ಸಂಪೂರ್ಣವಾಗಿ ವಿರೋಧಿಸುವ ಜಗತ್ತಿನ ಜನತೆಯ ಮೂಲ ನೀತಿಗೆ ವಿರೋಧವಾಗಿ ವರ್ತಿಸುತ್ತಿದ್ದಾರೆ" ಎಂದು ಸಾರಿದರು.

ಕರ್ನಾಟಕದಿಂದ ಅಧಿವೇಶನಕ್ಕೆ ಹೋದ 5 ಮಂದಿ ಪ್ರತಿನಿಧಿಗಳ ತಂಡದ ಮುಖಂಡತ್ವವನ್ನು ಕಾಂ. ಪಿ. ರಾಮಚಂದ್ರರಾಯರು ವಹಿಸಿದ್ದು, ಕಾಂ. ಮುಗುವಾಳಪ್ಪ, ಜಗನ್ನಾಥ, ಕೆ. ವೆಂಕಟೇಶ್ ಮತ್ತು ಯು. ಜನಾರ್ಧನ ನಾಯಕ್ ಇತರ ಪ್ರತಿನಿಧಿಗಳಾಗಿದ್ದರು. ಕಾಂ. ಪಿ. ರಾಮಚಂದ್ರರಾಯರು ಕರ್ನಾಟಕ ರಾಜ್ಯದ ರೈತರ ಮುಂದಿರುವ ಸಮಸ್ಯೆಗಳನ್ನು ವಿವರಿಸಿ "ನಾವೂ ದೇಶದ ರೈತರ ಚಳುವಳಿಯಲ್ಲಿ ಇನ್ನು ಹಿಂದೆಬೀಳಲಾರೆವು" ಎಂದು ಭರವಸೆಯನ್ನು ವ್ಯಕ್ತಪಡಿಸಿದರು. ●

## ರೈತಸಂಘದ ಜಿಲ್ಲಾ ಮತ್ತು ಸ್ಥಳೀಯ ಸಮಿತಿಗಳ ಅವಗಾಹನೆಗೆ

ಕಿಸಾನ್‌ಸಭಾ ರಾಜ್ಯಸಮ್ಮೇಳನವು ಮೇ ತಿಂಗಳ ಮಧ್ಯದಲ್ಲಿ ಜರುಗಲಿದೆ. ಕಿಸಾನ್‌ಸಭಾ ಸದಸ್ಯತ್ವದ ವಿವರ ಮತ್ತು ಹಣವನ್ನು ಮೇ ಒಂದನೇ ತಾರೀಖಿನೊಳಗೆ ಕಿಸಾನ್‌ಸಭಾ ಕೇಂದ್ರಕ್ಕೆ ಕಳುಹಿಸಿಕೊಡಲೇಬೇಕು. ಆದುದರಿಂದ ಎಲ್ಲಾ ಜಿಲ್ಲಾಸಮಿತಿಗಳು ಮತ್ತು ಸ್ಥಳೀಯ ಸಮಿತಿಗಳು ಸದಸ್ಯತ್ವವನ್ನು ಸೇರಿಸುವ ಕೆಲಸವನ್ನು ತ್ವರಿತಗೊಳಿಸಿ, ಏಪ್ರಿಲ್ ತಿಂಗಳ 25 ರೊಳಗೆ ಸದಸ್ಯತ್ವದ ವಿವರ ಮತ್ತು ಹಣವನ್ನು ಕಾಂ. ಎಂ.ಕೆ. ಭಟ್‌ಅವರಿಗೆ ಕಳುಹಿಸಿಕೊಡಬೇಕು. ಏಪ್ರಿಲ್ 25ನೇ ತಾರೀಖಿನೊಳಗೆ ಸದಸ್ಯತ್ವದ ವಿವರ ಮತ್ತು ಹಣವನ್ನು ರಾಜ್ಯ ಕೇಂದ್ರಕ್ಕೆ ಕಳುಹಿಸಿಕೊಟ್ಟರೆ ಮಾತ್ರ ರಾಜ್ಯಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸಬಹುದು. ಸಂಬಂಧಪಟ್ಟ ಸಮಿತಿಗಳು ಕೂಡಲೇ ಬೇಕಾದ ವ್ಯವಸ್ಥೆಯನ್ನು ಮಾಡಬೇಕಾಗಿ ವಿನಂತಿ.

ಪಿ. ರಾಮಚಂದ್ರರಾವ್
ಪ್ರಾಂತ ರೈತಸಂಘದ ಸಂಚಾಲಕ.

## ಕೊಡಗಿನಾದ್ಯಂತ ತಿತಿಮತಿ ರೈತರ ಹೋರಾಟಕ್ಕೆ ಬೆಂಬಲ

ಕೊಡಗು ಜಿಲ್ಲೆಯಾದ್ಯಂತ ತಿತಿಮತಿ ರೈತರು ಸರಕಾರದ ದಬ್ಬಾಳಿಕೆ ವಿರುದ್ಧ, ಬಲತ್ಕಾರದಿಂದ ಒಕ್ಕಲೆಬ್ಬಿಸುವುದರ ವಿರುದ್ಧ ನಡೆಸುವ ಹೋರಾಟಕ್ಕೆ ಬೆಂಬಲ ದೊರೆತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷ ಮತ್ತು ಕೊಡಗು ಜಿಲ್ಲಾ ರೈತಸಂಘ ಹಾಗೂ ಸಿ.ಐ.ಟಿ.ಯು. ನೇತೃತ್ವದಲ್ಲಿ ಏಪ್ರಿಲ್ 2 ರಿಂದ 10ರ ತನಕ ಬೇರೆ ಬೇರೆಡೆ ಪ್ರತಿಭಟನಾಸಭೆ, ಸತ್ಯಾಗ್ರಹ, ಪಿಕೆಟಿಂಗ್, ಗ್ರಾಮ ಮತ್ತು ರಸ್ತೆಬದಿ ಸಭೆಗಳು ನಡೆಯುತ್ತಲಿವೆ. 8-4-79 ರಂದು ಬೆಳಗ್ಗೆ ಕುಟ್ಟ ಪೋಲೀಸ್ ಸ್ಟೇಶನ್ ಎದುರು ಸುಮಾರು 50 ಮಂದಿ ಕಾರ್ಯಕರ್ತರು ಕಾಂ. ಕೃಷ್ಣನ್ ಅವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಸಿದರು. 8-4-79 ರಂದು ಮಧ್ಯಾಹ್ನ ಒಂದು ಗಂಟೆಗೆ ಸಿದ್ದಾಪುರದಲ್ಲಿ ಸಿ.ಐ.ಟಿ.ಯು. ಮತ್ತು ಪಕ್ಷದ ಹಿತೈಷಿಗಳು ಸುಮಾರು 150 ಮಂದಿ ಕಾಂ. ಸ್ಟೇನ್‌ವಾಜ್ ಅವರ ಮುಖಂಡತ್ವದಲ್ಲಿ ಸತ್ಯಾಗ್ರಹ ನಡೆಸಿದರು. 10-4-79 ರಂದು ವಿರಾಜಪೇಟೆಯಲ್ಲಿ ಫಾರೆಸ್ಟ್ ಆಫೀಸಿನ ಎದುರು ಸುಮಾರು 50 ಮಂದಿ ಸ್ವಯಂಸೇವಕರು ಸತ್ಯಾಗ್ರಹ ನಡೆಸುವ ತೀರ್ಮಾನ ಮಾಡಿರುವರು. ಬಾಳೆಕಾಡು ಪ್ರದೇಶದ ಶ್ರಮ

[7ನೇ ಪುಟ ನೋಡಿ]

# ಆರೆಸ್ಸೆಸ್ಸಿನ ಪ್ರತ್ಯೇಕತೆಯ ಹಿಂದೆ

(ಪೀಪಲ್ಸ್ ಡೆಮೋಕ್ರಸಿಯಿಂದ)

ಮಾರ್ಚಿ 4 ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಸ್ಥಳೀಯ ಆರೆಸ್ಸೆಸ್ ಶಾಖೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಅದರ ಸರಸಂಘ ಚಾಲಕ ಬಾಳಾಸಾಹೇಬ್ ದೇವರಸರು ಒಂದು ಪ್ರಶ್ನೆಯನ್ನು ತಮ್ಮ ವಿರೋಧಿಗಳಿಗೆ ಹಾಕಿದ್ದಾರೆ. ಅದೇನೆಂದರೆ, "ಹಿಂದುಗಳ ಸೇವೆ ಮಾಡುವುದು ಪಾಪವೇ ?" ಎಂಬುದು.

ದೆಹಲಿಯಲ್ಲಿರುವ ಎಲ್ಲಾ ಪ್ರಸಿದ್ಧ ಆರೆಸ್ಸೆಸ್ ನಾಯಕರು ಭಾಗವಹಿಸಿದ್ದ ರ‍್ಯಾಲಿಯಲ್ಲಿ ಬಾಳಾಸಾಹೇಬರು ಪ್ರಶ್ನೆ ಎಸೆದದ್ದನ್ನು ನೋಡಿದರೆ, ಆರೆಸ್ಸೆಸ್ ತನ್ನ ಪೂರ್ವನಿಶ್ಚಿತ ದಾರಿಯನ್ನು ಬಿಡುವುದಿಲ್ಲವೆಂದು ತಮ್ಮ ವಿರೋಧಿಗಳಿಗೆ ಸ್ಪಷ್ಟಪಡಿಸಲು ಅವರು ಪ್ರಯತ್ನಿಸಿದಂತೆ ಕಾಣುತ್ತದೆ.

ಈ ಗಿ.ನಂ.ತೆ. ಗಾಂಧೀಜಿಯವರ ಮರಣ ಪೂರ್ವದ ದಿನಗಳಿಂದಲೂ ಆರೆಸ್ಸೆಸ್ ಭಾರತದ ರಾಜಕೀಯ ಚರಿತ್ರೆಯಲ್ಲಿ ಪ್ರತ್ಯೇಕವಾಗಿಯೇ ಉಳಿಯುತ್ತಾ ಬಂದಿದೆ. ವಿರೋಧಿಗಳ ಟೀಕೆಗಳನ್ನು ತಿರಸ್ಕರಿಸುವುದರ ಮೂಲಕ ತನ್ನ ಅಸ್ತಿತ್ವ ಮತ್ತು ಸಂಘಟನೆಯಲ್ಲಿ ಐಕ್ಯತೆಯನ್ನು ಉಳಿಸಿಕೊಳ್ಳಬಹುದೆಂದು ಅವರು ಭಾವಿಸಿದಂತೆ ತೋರುತ್ತೆ. ಆದ್ದರಿಂದಲೇ ಅವರು ತಮ್ಮ ವಿರೋಧಿಗಳು ಎತ್ತುವ ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೆ ಹೋಗುವುದಿಲ್ಲ. ರಾಮಲೀಲಾ ಮೈದಾನದಲ್ಲಿ 75 ನಿಮಿಷಗಳ ಕಾಲ ಬಾಳಾಸಾಹೇಬರು ಯಾವ ಟೀಕೆಗಳನ್ನು ಎತ್ತಿಕೊಂಡು ಮಾತನಾಡಿದರೋ ಅಂತಹ ಟೀಕೆಗಳು ತಮ್ಮ ಸಂಘಟನೆಗೆ ಏಕೆ ಬಂದಿದೆಂಬುದಕ್ಕೂ ಅವರು ಉತ್ತರಿಸುವುದಿಲ್ಲ.

ಆರೆಸ್ಸೆಸ್ಸಿಗೆ ನಿಷ್ಠೆಯಿಂದ ಇದ್ದೇವೆಂದು ಪ್ರದರ್ಶಿಸಿಕೊಂಡ ಶ್ರೀ ವಾಜಪೇಯಿಯವರಾಗಲೀ, ವಾರ್ತಾ ಮಂತ್ರಿ ಅದ್ವಾನಿಯವರಾಗಲೀ ತಮ್ಮ ಸಂಘಟನೆಗೆ ಎಲ್ಲಾ ಕಡೆಯಿಂದ ಬರುತ್ತಿರುವ ಧಾಳಿಗೆ ಕಾರಣವೇನೆಂದು ಯೋಚಿಸಲು ಸ್ವಲ್ಪ ತಲೆಗೆ ಅವಕಾಶ ಕೊಡುತ್ತಿದ್ದರೆ, ಅವರಿಗೆ ತಿಳಿಯುತ್ತಿತ್ತು ಈ ಟೀಕೆಗಳ ಹಿಂದೆ ಇರುವವರು ಚರಣಸಿಂಗರಾಗಲೀ ಅಥವಾ ರಾಜನಾರಾಯಣರಾಗಲೀ ಅಲ್ಲ, ಅಥವಾ ಆರೆಸ್ಸೆಸ್ಸಿನ ಮುಖಪತ್ರಿಕೆ "ಆರ್ಗನೈಸರ್" ಹೇಳುವಂತೆ ವಿದೇಶಿ ಏಜಂಟರ ಕೆಲಸವೂ ಅಲ್ಲ, **ಇದು ಜನಸಂಘವು ಜನತಾಪಕ್ಷದ ಹೆಸರಿನಲ್ಲಿ ನಡೆಸುತ್ತಿರುವ ಚಟುವಟಿಕೆಗಳಿಂದ ಬಂದದ್ದು ಎಂದು. ಆದ್ದರಿಂದಲೇ ಅವರು ಇತರರನ್ನು ದೂಷಿಸುವ ಮೊದಲು ತಮ್ಮನ್ನು ತಾವು ದೂಷಿಸಿಕೊಳ್ಳಬೇಕಾಗಿದೆ.**

ಸ್ವಲ್ಪ ಆರೆಸ್ಸೆಸ್ಸಿನ ಹುಟ್ಟಿನತ್ತ ನೋಡೋಣ. ಬಾಳಾಸಾಹೇಬರೇ ಹೇಳುವಂತೆ ಸ್ವಯಂಸೇವಕಸಂಘ 1925 ರಲ್ಲಿ ಹುಟ್ಟಿಕೊಂಡಿತು. ಇದೇ ವರ್ಷದಲ್ಲಿ ಅಸಹಕಾರ ಚಳುವಳಿ ಮತ್ತು ಖಿಲಾಫತ್ ಚಳುವಳಿಗಳು ವಿಫಲಗೊಂಡು, ಹಿಂದು-ಮುಸ್ಲಿಮರ ಐಕ್ಯತೆ ಮುರಿದುಬಿದ್ದದ್ದಲ್ಲದೆ ಮತೀಯ ಘರ್ಷಣೆಗಳಿಗೂ ಎಡೆಮಾಡಿಕೊಟ್ಟಿತ್ತು.

**ಕಟ್ಟಾ ಹಿಂದೂವಾದಿಗಳ ಕೂಸು :**

ಆ ದಿನಗಳು ಎಂತಹವು ಎಂಬುದನ್ನು ಮಹಾತ್ಮಾ ಗಾಂಧೀಜಿಯವರ ಬಾಯಲ್ಲಿಯೇ ಹೇಳಿಸುವುದಾದರೆ; "ಗೋಹತ್ಯೆಯನ್ನು ನಿಷೇಧಿಸಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು, ಮನುಷ್ಯರ ಬಿಸಿರಕ್ತವನ್ನು ಚೆಲ್ಲುತ್ತಿದ್ದ ಕಾಲ. ಮುಸಲ್ಮಾನರ ಮತೀಯ ಭಾವನೆಗಳನ್ನು ಪ್ರಶ್ನಿಸುವಂತೆ ಹಿಂದೂ ನಾಯಕರು ಮಸೀದಿಗಳ ಮುಂದೆ ಭಜನೆಗಳನ್ನು ಮಾಡಿ ತಮ್ಮ ಶಕ್ತಿ ಪ್ರದರ್ಶಿಸಿದರೆ, ಅದಕ್ಕೆ ಪ್ರತಿಯಾಗಿ ಮುಸ್ಲಿಮರ ಮುಖಂಡರು ದೇವಸ್ಥಾನಗಳ ಮುಂದೆ ಗೋವಧೆ ಮಾಡುವುದು ಸಾಮಾನ್ಯವಾಗಿತ್ತು. ಹಿಂದೂಗಳ ಚಳುವಳಿಯಾದ ಸುಧಿ ಮತ್ತು ಸಂಘಟನೆಗಳೂ ಇದೇ ಕಾಲಕ್ಕೆ ನಡೆದುವು. ಈ ಐತಿಹಾಸಿಕ ಸತ್ಯದ ತಿಳುವಳಿಕೆ ಇರುವ ಯಾರೇ ಆಗಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಕಟ್ಟಾ ಹಿಂದೂ ಧರ್ಮಾಭಿಮಾನಿಗಳ ಕೂಸು ಎಂಬುದನ್ನು ಅಲ್ಲಗಳೆಯುವುದಿಲ್ಲ.

ಅಂದಿನಿಂದಲೂ ಅದು ಅಲ್ಪಸಂಖ್ಯಾತರ ವಿರುದ್ಧ ಅನೇಕ ಧರ್ಮಾಂಧತೆಯ ಕೆಲಸಗಳನ್ನು ಮಾಡಿರುವುದೇ ಅಲ್ಲದೆ, ಎಲ್ಲಾ ಧರ್ಮಗಳನ್ನೂ ಒಂದೇ ದೃಷ್ಟಿಕೋನದಿಂದ ನೋಡುವ ಬಹುಸಂಖ್ಯಾತರ ವಿರುದ್ಧವೂ ಕೆಲಸ ಮಾಡಿದೆ. (ಮಹಾತ್ಮಾಗಾಂಧಿಯವರೂ ಇಂತಹ ಧರ್ಮಾಂಧತೆಗೆ ಬಲಿಯಾಗಿದ್ದರು). ಸಂಘದ ನಂತರದ ನಾಯಕ ದಿವಂಗತ ಗೋಲ್ವಾಲ್ಕರ್‌ರವರು ಹಿಂದೂ ರಾಷ್ಟ್ರದ ಘೋಷಣೆಯನ್ನು ಎತ್ತಿದ್ದಲ್ಲದೆ, ವರ್ಣಾಶ್ರಮವನ್ನು ಸಮರ್ಥಿಸಿಕೊಂಡವರು.

ಮಾರ್ಚಿ 11ರ "ಆರ್ಗನೈಸರ್" ಪತ್ರಿಕೆಯು ಬಾಳಾಸಾಹೇಬ್ ದೇವರಸರನ್ನು ಉದ್ಧರಿಸುತ್ತಾ "ರಾಜಾ ರಾಮ್ ಮೋಹನ್ ರಾಯ್, ಮಹಾತ್ಮಾ ಫುಲೆ, ಜಸ್ಟೀಸ್ ರಾನಡೆ, ಭೀಮರಾವ್ ಅಂಬೇಡ್ಕರ್, ಸ್ವಾಮಿ ದಯಾನಂದ, ನಾರಾಯಣಗುರು, ಸ್ವಾಮಿ ವಿವೇಕಾನಂದ ಮತ್ತು ಅರವಿಂದ ಮಹರ್ಷಿಗಳಂಥ ಮಹಾನ್ ವ್ಯಕ್ತಿಗಳು ಕೇವಲ ಹಿಂದೂ ಸಮಾಜದ ಪುನರುಜ್ಜೀವನಕ್ಕಾಗಿ, ಅಸ್ಪೃಶ್ಯತೆ, ವರದಕ್ಷಿಣೆ, ಬಾಲ್ಯವಿವಾಹ ಮತ್ತು ವಿಧವಾವಿವಾಹದಂಥ ಸುಧಾರಣೆಗಳನ್ನು ತಂದರು. ಅಂದು ಅವರು ಕೈಗೊಂಡ ಕಾರ್ಯವೇ ನಮ್ಮ ಇಂದಿನ ಕಾರ್ಯ" ಎಂದು ಬರೆದಿದೆ.

ಆದರೆ, ಬಾಳಾಸಾಹೇಬರಿಗೆ ಗೊತ್ತಿರಬೇಕು, ಅವರು ಮೇಲೆ ಹೇಳಿರುವ ಎಲ್ಲಾ ವ್ಯಕ್ತಿಗಳೂ ತಮ್ಮ ಪಾತ್ರವನ್ನು ಸಾಮಾಜಿಕ ಬದಲಾವಣೆಗಾಗಿ ಮಾಡಿದ್ದಲ್ಲದೆ, ಸ್ವಾತಂತ್ರ್ಯ ಪೂರ್ವದಲ್ಲೇ ತಮ್ಮ ಸಂದೇಶಗಳನ್ನು ಭಾರತದ ರೈತ, ಕಾರ್ಮಿಕರ ಮಧ್ಯೆ ತೆಗೆದುಕೊಂಡು ಹೋದರು. ಅವರಲ್ಲಿ ಒಬ್ಬರಾದ ಅಂಬೇಡ್ಕರ್‌ರವರು ಸ್ವಾತಂತ್ರ್ಯಕ್ಕೆ ಮೊದಲು ಹಾಗೂ ನಂತರ ರಾಜಕೀಯ ಮುಖಂಡರಾಗಿ ಬೆಳೆದದ್ದಲ್ಲದೆ, ನಿಸ್ಸಂಶಯವಾಗಿ ಆರೆಸ್ಸೆಸ್‌ನವರು ಹೇಳುವಂಥಹ ಎಲ್ಲಾ ರೀತಿಯ ಹಿಂದೂ ಧರ್ಮದ ಪುನರುಜ್ಜೀವನವನ್ನು ವಿರೋಧಿಸಿದವರು. ಆರೆಸ್ಸೆಸ್‌ನವರು ಪ್ರತಿನಿಧಿಸುವ ಹಿಂದೂತ್ವವನ್ನು ಪ್ರಶ್ನಿಸಿದವರು. ಅಲ್ಲದೆ, ಮೇಲಿನ ಎಲ್ಲಾ ವ್ಯಕ್ತಿಗಳೂ ಬಾಳಾಸಾಹೇಬರು ಹೇಳಿರುವ ಒಂದಲ್ಲ ಒಂದು ಸಮಾಜ ಸುಧಾರಣಾ ಕೆಲಸದಲ್ಲಿ ತೊಡಗಿದ್ದವರು. ಆದರೆ, ಅಂತಹ ಯಾವುದೇ ಸಮಾಜ ಸುಧಾರಣಾ ಚಳುವಳಿಯನ್ನು ಮಾಡಿದ್ದೇವೆಂದು ಆರೆಸ್ಸೆಸ್‌ನವರು ಹೇಳಿಕೊಳ್ಳುವಂತಿಲ್ಲ. ಅದರ ಒಂದೇ ಒಂದು ಸಾಧನೆ ಎಂದರೆ "ಭಾರತದ ಪ್ರಾಚೀನ ಗತವೈಭವ"ದ ವಿಚಾರಗಳನ್ನು ಶಾಖೆಗಳ ಮೂಲಕ ಪ್ರಸಾರಮಾಡುತ್ತಿರುವುದು.

**ಅಧಿಕಾರದ ಆಸೆ:**

ಬಾಳಾಸಾಹೇಬರು, ಆರೆಸ್ಸೆಸ್‌ಗೆ ಯಾವುದೇ ಅಧಿಕಾರ ರಾಜಕೀಯದ ಕ್ಷೇತ್ರವನ್ನು ಪ್ರವೇಶಿಸುವ ಆಸೆಯಿಲ್ಲ, ಅದಕ್ಕೆ ಅಧಿಕಾರ ಅಥವಾ ಪ್ರಸಿದ್ಧಿ ಬೇಕಿಲ್ಲವೆಂದು ಹೇಳಿದ್ದಾರೆ. ಹಾಗಾದರೆ ನಾವು ನಮ್ರತೆಯಿಂದ ಅವರಲ್ಲಿ ಕೇಳಬೇಕಾಗಿರುವುದು 1950ರಲ್ಲಿ ಭಾರತೀಯ ಜನಸಂಘ ಎಂಬ ಹೊಸ ರಾಜಕೀಯ ಪಕ್ಷವನ್ನು ಆರೆಸ್ಸೆಸ್‌ನವರು ಹುಟ್ಟಿಸಿದ್ದು "ಧಾರ್ಮಿಕ" ಉದ್ದೇಶದಿಂದಲೋ ಅಥವಾ ಸಾಂಸ್ಕೃತಿಕ ಪುನರುಜ್ಜೀವನದ ಉದ್ದೇಶದಿಂದಲೋ? ಯಾವ ರಾಜಕೀಯ ಪಕ್ಷ ಎಲ್ಲಾ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಿದೆಯೋ, 1967ರಲ್ಲಿ ಅನೇಕ ರಾಜ್ಯಗಳ ಮಂತ್ರಿಮಂಡಲಗಳಲ್ಲಿ ಭಾಗವಹಿಸಿತ್ತೋ, 1971ರಲ್ಲಿ ಇತರೆ ಪಕ್ಷಗಳೊಂದಿಗೆ ಸೇರಿಕೊಂಡು "ಮಹಾಮೈತ್ರಿಕೂಟ"ವನ್ನು ಮಾಡಿಕೊಂಡಿತ್ತೋ, ಆ ಚುನಾವಣೆಗಳಲ್ಲಿ ಪೆಟ್ಟುತಿಂದು ಜಯಪ್ರಕಾಶ್ ನಾರಾಯಣರ ಚಳುವಳಿಯಲ್ಲಿ ಸೇರಿಕೊಂಡಿತ್ತೋ (ಬಾಳಾಸಾಹೇಬರು ಅಂದಿನ ಪ್ರಧಾನಿ ಇಂದಿರಾಗಾಂಧಿಯವರಿಗೆ ಶರಣಾಗತಿಯ ಪತ್ರವನ್ನು ಬರೆದ ಮೇಲೆ), ಇಂದು ಕೇಂದ್ರ ಮತ್ತು ಅನೇಕ ರಾಜ್ಯಗಳಲ್ಲಿ ಮಂತ್ರಿಗಳನ್ನು ಹೊಂದಿದೆಯೋ ಅಂತಹ ರಾಜಕೀಯ ಪಕ್ಷವೊಂದರ ಆಧ್ಯಾತ್ಮಿಕ ಮಾತ್ರ ಸಂಘಟನೆ ಆರೆಸ್ಸೆಸ್‌ನವರಿಗೆ "ಅಧಿಕಾರ ಮತ್ತು ಜನಪ್ರಿಯತೆ" ಬೇಡವೆಂದು ಹೇಳುವುದು, ಹೇಳುವವರ ಕಿಮ್ಮತ್ತನ್ನು ಕಳೆಯುತ್ತದೆ. ಇತರೆ ಯಾವುದೇ ಭಾರತೀಯ ರಾಜಕೀಯ ಪಕ್ಷಗಳಿಗೆ ಇರುವಂತೆ ಜನಸಂಘ ಹಾಗೂ ಅದರ ಆಧ್ಯಾತ್ಮಿಕ ಪ್ರೇರಕಶಕ್ತಿ ಆರೆಸ್ಸೆಸ್‌ನವರಿಗೂ ರಾಜಕೀಯ ಅಧಿಕಾರದ ಆಸೆಯಿದೆ ಎಂಬುದನ್ನು ಸಾಬೀತುಗೊಳಿಸಲು "ಆರ್ಗನೈಸರ್" ಪತ್ರಿಕೆಯ ಪುಟಗಳೇ ಸಾಕು.

ರಾಜಕೀಯ ತಂತ್ರದ ದೃಷ್ಟಿಯಿಂದ ಆರೆಸ್ಸೆಸ್, ಜನಸಂಘದ ನಾಯಕರಿಗೆ "ಅಚ್ಚ ಸಾಂಸ್ಕೃತಿಕ ಸಂಘಟನೆ" ಆರೆಸ್ಸೆಸ್ ಮತ್ತು ಒಂದು ರಾಜಕೀಯ ಪಕ್ಷವಾದ ಜನಸಂಘವನ್ನು ಔಪಚಾರಿಕವಾಗಿ ಪ್ರತ್ಯೇಕವಾಗಿ ಇಡುವುದರಿಂದ ಉಪಯೋಗವಾಗಬಹುದು. ಆದರೆ ಅವರಿಗೆ ಸತ್ಯದ ನಿಷ್ಠೆ ಇದ್ದರೆ ಒಪ್ಪಿಕೊಳ್ಳಲೇಬೇಕಾದ ವಿಷಯವೆಂದರೆ, ಜನಸಂಘದ ಸದಸ್ಯ ಅಥವಾ ನಾಯಕ ಆರೆಸ್ಸೆಸ್ಸಿನ ಬಿಗಿಯಾದ ಶಿಸ್ತನ್ನು ಮುರಿಯುವಂತಿಲ್ಲ, ಆದ್ದರಿಂದಲೇ ಆರೆಸ್ಸೆಸ್‌ನ ರಾಜಕೀಯ ಜನಸಂಘದ ಹೆಸರಿನಲ್ಲಿ ನಡೆಯುವುದು.

ಈಗ, ಆರೆಸ್ಸೆಸ್ಸಿನ ಸದ್ಯದ ಪರಿಸ್ಥಿತಿಗೆ ಕಾರಣವಾಗಿರುವ ಘಟನೆಗಳ ಹಿನ್ನೆಲೆಯನ್ನು ನೋಡುವ: ವಾಜಪೇಯಿ, ಅದ್ವಾನಿಯಿಂದ ಹಿಡಿದು ಕೆಳಗಿನ ಸ್ವಯಂಸೇವಕರವರೆಗೆ ಎಲ್ಲರೂ ಮಾರ್ಚಿ 4 ರಂದು ರಾಮಲೀಲಾ ಮೈದಾನದಲ್ಲಿ ಸೇರಿ ಒಗ್ಗಟ್ಟನ್ನು ಪ್ರದರ್ಶಿಸಿದ್ದು ಏಕೆ? ಇದು "ಆಧ್ಯಾತ್ಮಿಕ" ಅಥವಾ "ಸಾಂಸ್ಕೃತಿಕ" ಕಾರಣಗಳಿಗಾಗಿ ಅಂತೂ ಅಲ್ಲ.

ಇದಕ್ಕೆ ಕಾರಣ ಉತ್ತರ ಪ್ರದೇಶದಲ್ಲಿ ಮಂತ್ರಿ ಸ್ಥಾನಗಳನ್ನು ಹಂಚಿಕೊಳ್ಳುವಲ್ಲಿ ನಡೆದಿರುವ ಅಧಿಕಾರದ ಕಚ್ಚಾಟ. ಭಾರತೀಯ ಲೋಕದಳದೊಂದಿಗೆ ಸೇರಿಕೊಂಡಿದ್ದ ಜನಸಂಘ ಹಿಂದೆ ತನ್ನ ವಿರೋಧಿಗಳನ್ನು ಹತ್ತಿಕ್ಕಿದ್ದರು, ಆದರೆ ಇಂದು ಭಾರತೀಯ ಲೋಕದಳದ ನೇತೃತ್ವದಲ್ಲಿ ಇತರ ಪಕ್ಷಗಳು ಒಂದಾಗಿ ಜನಸಂಘವನ್ನು ಉ. ಪ್ರ. ಮಂತ್ರಿ ಮಂಡಲದಿಂದ ಹೊರಗೆ ಇಟ್ಟಿದ್ದಾರೆ. ಅಲ್ಲದೆ ಉ. ಪ್ರ. ದ ಮಾದರಿಯನ್ನು ಕೇಂದ್ರ ಮತ್ತು ಇತರೆ ರಾಜ್ಯಗಳಿಗೂ ವಿಸ್ತರಿಸುವ ಸಂಭವವಿದೆ. ಈ ಅಧಿಕಾರ ಹಂಚಿಕೊಳ್ಳುವ ಬಗ್ಗೆಯೇ ಬಾಳಾಸಾಹೇಬರು ಹೇಳಿದ್ದು. ಉ. ಪ್ರ. ವಿದ್ಯಾಮಾನಗಳು ಅಧಿಕಾರ ರಾಜಕೀಯದ ಹೋರಾಟವಲ್ಲದೆ "ಆಧ್ಯಾತ್ಮಿಕ" ಅಥವಾ "ಸಾಂಸ್ಕೃತಿಕ" ವಿಷಯಗಳೇನೂ ಅಲ್ಲ.

**ಉತ್ತರಪ್ರದೇಶದ ಬೆಳವಣಿಗೆಗಳು:**

ಈ ಸಂದರ್ಭದಲ್ಲಿ ಆರೆಸ್ಸೆಸ್ಸಿನ ಮುಖಂಡ ಶ್ರೀನಾನಾಜಿ ದೇಶಮುಖ್‌ರವರು ಒಂದು ವರ್ಷದ ಹಿಂದೆ, ರಚನಾತ್ಮಕ ಕೆಲಸಗಳಲ್ಲಿ ತೊಡಗುವುದಾಗಿಯೂ ತಾವು ಇನ್ನು ಮುಂದೆ ಅಧಿಕಾರ ರಾಜಕೀಯದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದ್ದನ್ನು ನಾವು ಸ್ಮರಿಸಿಕೊಳ್ಳಬೇಕು. ಜನತಾಪಕ್ಷದ ಘಟಕಗಳ ಮಧ್ಯೆ ಭಿನ್ನಾಭಿಪ್ರಾಯಗಳು ಆಳವಾಗಿ, ಆಂಶಿಕ ಒಳಜಗಳಗಳಿಂದ ಜನತಾ ಪಕ್ಷ ಒದ್ದಾಡುವಾಗಲೇ ನಾನಾಜಿ ದೇಶಮುಖರು ರಾಜೀನಾಮೆ ಕೊಟ್ಟರು. ಆ ಮೂಲಕ ದಿನ ದಿನಕ್ಕೆ ಕಷ್ಟವಾಗುತ್ತಿರುವ ಅಧಿಕಾರ ರಾಜಕೀಯದಲ್ಲಿ ಮತ್ತೆ ಪ್ರವೇಶಿಸಲು ಸುಲಭವೆಂದು ಅವರು ಭಾವಿಸಿದರು. ಆದ್ದರಿಂದ ಆರೆಸ್ಸೆಸ್ ಮತ್ತು ಜನಸಂಘದವರು ರಾಜಕೀಯದಿಂದ ದೂರವಿದ್ದೇವೆಂದು ಹೇಳುವ ಮೊದಲು ಸ್ವಯಂ ಟೀಕೆ ಮಾಡಿಕೊಳ್ಳಲಿ. ಅವರ ಪ್ರತ್ಯೇಕತೆಗೆ ಕಾರಣ ಅವರ ರಾಜಕೀಯ ಚಟುವಟಿಕೆಗಳು ಅದರಲ್ಲೂ ಅವರದ್ದೇ ಆದ ವಿಶಿಷ್ಟ ರಾಜಕೀಯವೇ ಕಾರಣ.

ಕಳೆದ ಎರಡು ವರ್ಷಗಳ ತೀವ್ರ ರಾಜಕೀಯ ಬಿಕ್ಕಟ್ಟು ಮತ್ತು 19 ತಿಂಗಳ ತುರ್ತುಪರಿಸ್ಥಿತಿಯ ಕಹಿ ಅನುಭವ ಜನಸಂಘದ ನಾಯಕರಿಗೆ ಪಾಠ ಕಲಿಸಬಹುದೆಂದು ಕೆಲವರಿಗೆ ಅನಿಸಿತ್ತು. ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುವ ಬಾಳಾಸಾಹೇಬರ ಪ್ರಶ್ನೆ "ಹಿಂದುಗಳ ಸೇವೆ ಮಾಡುವುದು ಪಾಪವೇ" ಎಂದು ಕೇಳುವುದರಿಂದ ಜಾತ್ಯಾತೀತ ಪ್ರಜೆಗಳಿಂದ ಅದು ದೂರವಾಗಿ ಸದ್ಯದ ಪರಿಸ್ಥಿತಿಯಿಂದ ಬಿಡುಗಡೆಯಾಗಲಾರದು ಎಂಬುದನ್ನು ಅರಿತುಕೊಳ್ಳುವರೆಂದು ಭಾವಿಸಿದ್ದರು. ಆದರೆ ಅವರು ಮೇಲಿನ ಅನುಭವಗಳಿಂದಲೂ ಪಾಠ ಕಲಿತಿಲ್ಲ.

**ರಾಷ್ಟ್ರೀಯ ಐಕ್ಯತೆಗೆ ಧಕ್ಕೆ:**

ವಾಸ್ತವ ಪರಿಸ್ಥಿತಿಯನ್ನು ನೋಡಿದರೆ, ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರು. ಬಹುಸಂಖ್ಯಾತರ ಸಂಘಟನೆಯನ್ನು ಮಾಡುವುದರಲ್ಲಿ ಯಾವ ತರ್ಕವಿದೆ? ಒಂದು ವೇಳೆ ಶೋಷಣೆಗೆ ಒಳಗಾದ ಜನಾಂಗದ ಸಂಘಟನೆಯನ್ನು ಮಾಡುವುದಾದರೆ, ಅದು ಅಗತ್ಯವೆಂದು ಒಪ್ಪಬಹುದು. ಆದರೆ, ಬಹುಸಂಖ್ಯಾತರ ಶೋಷಣೆ ಯಾವುದರಿಂದ? ಈ ಸಂಘಟನೆಯೇ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಸಂಶಯ ಮೂಡಿಸಿರುವುದು. ಜಾತಿ, ಮತ ಮತ್ತು ಭಾಷೆಗಳ ಹೆಸರಿನಲ್ಲಿ ವಿಭಾಗವಾಗಿರುವ ಜನತೆಯ ರಾಷ್ಟ್ರೀಯ ಐಕ್ಯತೆ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾಗಿದೆ. ಈ ಐಕ್ಯತೆಯನ್ನೇ ಆರೆಸ್ಸೆಸ್ ಜನಸಂಘದವರು ಒಡೆಯುತ್ತಿರುವುದು.

ರಾಷ್ಟ್ರೀಯ ಐಕ್ಯತೆಗೆ ಬೇಕಾಗಿರುವ ಮೊದಲ ಅವಶ್ಯಕತೆ ಎಂದರೆ ಜಾತ್ಯಾತೀತತೆ. ಜಾತ್ಯಾತೀತತೆ ಎಂದರೆ, ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಗೊಳಿಸುವುದು. ಧರ್ಮವನ್ನು ಸಂಪೂರ್ಣವಾಗಿ ರಾಜಕೀಯದಿಂದ ಬೇರ್ಪಡಿಸುವುದು. ಬಾಳಾಸಾಹೇಬರು, ಧರ್ಮ ಸಹಿಷ್ಣುತೆಯನ್ನು ಕುರಿತು ಹೇಳುತ್ತಾರೆ. ಆದರೆ ಜಾತ್ಯಾತೀತತೆ ಎಂದರೆ ಒಂದು ಧರ್ಮ ಇನ್ನೊಂದನ್ನು ಸಹಿಸುವುದು ಎಂದರ್ಥವಲ್ಲ, ಧರ್ಮ ಒಬ್ಬನ ಕೇವಲ ವೈಯಕ್ತಿಕ ನಂಬಿಕೆ, ಅದನ್ನು ರಾಷ್ಟ್ರ ಮತ್ತು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡದಂತೆ ತಡೆಯುವುದು ಎಂದರ್ಥ. ಆದ್ದರಿಂದ ಧಾರ್ಮಿಕ ಗುಂಪುಗಳನ್ನು

[6ನೇ ಪುಟ ನೋಡಿ]

# ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಿಂದ ಸಾಮ್ರಾಜ್ಯಶಾಹಿಯ ಜೊತೆ ಐಕ್ಯ ಕಾರ್ಯಾಚರಣೆಗೆ

ಚೀನಾ ಮತ್ತು ವಿಯೆಟ್ನಾಂಗಳ ನಡುವೆ ನಾಲ್ಕುವಾರಗಳ ಕಾಲ ಯುದ್ಧ ನಡೆದ ನಂತರ, ಈಗ ಮಾರ್ಚಿ ಕೊನೆಯಲ್ಲಿ ಎರಡೂ ದೇಶಗಳೂ ಹಾನಾಯ್‌ನಲ್ಲಿ, ಮಾತುಕತೆಗಾಗಿ ಸಂಧಿಸುತ್ತೇವೆಂದು ಪ್ರಕಟಿಸಿವೆ. ಸಶಸ್ತ್ರಹೋರಾಟಗಳು, ಇಬ್ಬರ ಮಧ್ಯೆ ನಡೆಯುವ ಮಾತಿನ ಯುದ್ಧ, ಪರಸ್ಪರ ದೂಷಣೆಗಳು ಇವೆಲ್ಲಾ ಇನ್ನೂ ಮುಗಿದಿಲ್ಲವೆನ್ನುವುದು ನಿಜ. ಆದರೆ ವಿಯೆಟ್ನಾಂ ಪ್ರದೇಶದಿಂದ ಚೀನದ ಪಡೆಗಳು ವಾಪಸ್ಸು ಆಗಿರುವುದು ಮತ್ತು ಹೊಸ ಹಂತದ ಮಾತುಕತೆ ಆರಂಭವಾಗಿರುವುದು, ಇವೆಲ್ಲವೂ ಚೀನ-ವಿಯೆಟ್ನಾಂ ಕದನದಲ್ಲಿ ಸ್ವಾಗತಾರ್ಹ ತಿರುವುಗಳು; ಯಾರು ಯಾರಿಗೆ ಪಾಠ ಕಲಿಸಿದರು, ಯಾರು ಯಾರಿಂದ ಏನು ಕಲಿತರು, ಈ ಎರಡು ಸಮಾಜವಾದಿ ದೇಶಗಳ ನಡುವಿನ ಯುದ್ಧದ ಕೊನೆ ಸಾಧನೆ ಏನು ಇತ್ಯಾದಿಯೆಲ್ಲವೂ, ಮುಂದಿನ ಇತಿಹಾಸಕಾರರು ವಸ್ತುನಿಷ್ಠತೆಯಿಂದ ಅಭ್ಯಾಸಮಾಡಬೇಕಾದ ವಿಷಯಗಳು. ಈ ತರದ ಚರ್ಚೆಗೆ ನಾವು ತೊಡಗದೆ, ಈ ಎರಡು ಸಮಾಜವಾದಿ ದೇಶಗಳ ನಡುವಿನ ಅಪಖ್ಯಾತ ಯುದ್ಧ ಕೊನೆಗೊಳ್ಳಲೆಂದು ಆಶಿಸುವುದು ಸೂಕ್ತ.

ಈ ಚೀನ-ವಿಯೆಟ್ನಾಂ ಕಲಹವು ಒಂದು ರಾಜಕೀಯ ಬಿಕ್ಕಟ್ಟಾಗಿ ಪರಿಣಮಿಸಿದೆಯೆಂಬುದರಲ್ಲಿ ಸಂದೇಹವಿಲ್ಲ. ಕಂಪೂಚಿಯದ ಪಾಲ್‌ಪಾಟ್ ಆಳ್ವಿಕೆ ಮತ್ತು ವಿಯೆಟ್ನಾಂ ಸಮಾಜವಾದಿ ಗಣರಾಜ್ಯಗಳ ನಡುವೆ ವರ್ಷವಿಡೀ ನಡೆದ ಗಡಿಯುದ್ಧವನ್ನು ರೂಪಿಸುವುದರಲ್ಲಿ ಸಾಕಷ್ಟು ಪಾತ್ರವಹಿಸಿದ ಚೀನಿ ಸೋವಿಯೆತ್ ಕಲಹ, ಪಾಲ್‌ಪಾಟ್ ಸರಕಾರದ ಪತನ ಮತ್ತು ಹೊಸ ಕಂಪೂಚಿಯ ಆಳ್ವಿಕೆಗೆ ವಿಯೆಟ್ನಾಂ, ಸೋವಿಯೆತ್‌ದೇಶ ಮತ್ತು ಇತರ ಸಮಾಜವಾದಿ ದೇಶಗಳು ತ್ವರಿತ ಬೆಂಬಲ ಮತ್ತು ಅಂಗೀಕಾರ ನೀಡಿರುವುದು, ಇವೆಲ್ಲದರ ಮಧ್ಯದಲ್ಲಿ ಈ ಚೀನ-ವಿಯೆಟ್ನಾಂ ಕಲಹ ಸಿಕ್ಕಿಕೊಂಡುಬಿಟ್ಟಿದೆ. "ವಿಯೆಟ್ನಾಂ ದೇಶವನ್ನು ರೇಗಿಸಿ ಅದಕ್ಕೆ ಪಾಠಕಲಿಸುವ" ಸಲುವಾಗಿ ಪಾಲ್‌ಪಾಟ್ ಆಳ್ವಿಕೆಯನ್ನು ಬೆಂಬಲಿಸುತ್ತಿದ್ದ ಚೀನಿ ಕಮ್ಯುನಿಸ್ಟ್ ನಾಯಕತ್ವಕ್ಕೆ ಈಗ ಪೆಟ್ಟುಬಿದ್ದಂತಾಗಿ, ವಿಯೆಟ್ನಾಮಿನ ವಿರುದ್ಧವೇ "ಅವರಿಗೆ ಪಾಠ ಕಲಿಸಲು" ಯುದ್ಧ ಹೂಡಿದರು. ರೊಮೇನಿಯ ಮತ್ತು ಯುಗೋಸ್ಲಾವಿಯ ಮುಂತಾದ ಸಮಾಜವಾದಿ ದೇಶಗಳು ಭಿನ್ನವಾದ ಟೀಕೆಗಳನ್ನು ಮಾಡಿ, ಕಂಪೂಚಿಯದ ಬೆಳವಣಿಗೆಗಳಲ್ಲಿ ವಿಯೆಟ್ನಾಂ ವಹಿಸಿದ ಪಾತ್ರದ ಬಗ್ಗೆ ಮತ್ತು ವಿಯೆಟ್ನಾಮಿನ ಮೇಲೆ ಚೀನ ನಡೆಸಿದ ಯುದ್ಧದ ಬಗ್ಗೆ ತಮ್ಮ ವಿರೋಧವನ್ನು ಸೂಚಿಸಿವೆ. ಆದರೆ, ಪಾಲ್‌ಪಾಟ್ ಆಳ್ವಿಕೆ ಮತ್ತು ಅದರ 'ತಪ್ಪು' ಆಂತರಿಕ ಮತ್ತು ವಿದೇಶಿ ನೀತಿಗಳ ಬಗ್ಗೆ ಚಕಾರ ಎತ್ತದೆ ಮೌನವಾಗಿವೆ. ಕಂಪೂಚಿಯ ಸಂಬಂಧದಲ್ಲಿ ವಿಯೆಟ್ನಾಮನ್ನು ತೀವ್ರವಾಗಿ ಖಂಡಿಸಿದ ಕೊರಿಯದ ಜನತಾ ಗಣರಾಜ್ಯವು ಚೀನ-ವಿಯೆಟ್ನಾಂ ಕಲಹದ ಬಗ್ಗೆ ತನ್ನ ಅಭಿಪ್ರಾಯವನ್ನು ಇದುವರೆಗೂ ವ್ಯಕ್ತಪಡಿಸಿಲ್ಲ.

ಥಾಯ್‌ಲ್ಯಾಂಡ್, ಮಲೇಸಿಯ, ಫಿಲಿಫೈನ್ಸ್, ಇಂಡೋನೇಷ್ಯ, ಶ್ರೀಲಂಕಾ, ಬರ್ಮಾ ಮುಂತಾದ ಏಷ್ಯಾದ ಇತರ ಸರ್ಕಾರಗಳು, ಪಾಲ್‌ಪಾಟ್ ಆಳ್ವಿಕೆ ಮತ್ತು ಅದರ ಅನೇಕ ದುಷ್ಕೃತ್ಯಗಳ ಬಗ್ಗೆ ಯಾವ ಸಹಾನುಭೂತಿಯನ್ನೂ ಹೊಂದಿರದೆ ಇದ್ದುದಕ್ಕೆ ಕಾರಣಗಳನ್ನು ಸುಲಭವಾಗಿ ಕಂಡುಕೊಳ್ಳಬಹುದು. ಆದರೆ ಅವು ಕಂಪೂಚಿಯದ ಹೊಸ ಸರ್ಕಾರವನ್ನು ನ್ಯಾಯಬದ್ಧವೆಂದು ಒಪ್ಪಿಕೊಳ್ಳುತ್ತಿಲ್ಲ. ಚೀನದ ಜನತಾ ಗಣರಾಜ್ಯದ ಜೊತೆ ಹತ್ತಿರದ ಸಂಬಂಧಗಳನ್ನು ಹೊಂದಿರುವ ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳು ಕಂಪೂಚಿಯದ ಹೊಸ ವಾಸ್ತವತೆಗಳನ್ನು ಒಪ್ಪಿಕೊಳ್ಳುವುದಿಲ್ಲ.

**ಸಾಮ್ರಾಜ್ಯ ಶಾಹಿಗಳ ಆಟ :**

ಕಂಪೂಚಿಯ-ವಿಯೆಟ್ನಾಂ ಸಂಗತಿಯನ್ನು ವಿಯೆಟ್ನಾಮಿನ ಮೇಲೆ ಚೀನ ನಡೆಸಿದ ದಾಳಿಯ ಪ್ರಶ್ನೆಯ ಜೊತೆ ಕೂಡಿಸುವುದು ಸರಿಯೂ ಅಲ್ಲ, ಅದರಿಂದ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ ಸಹಾಯವೂ ಆಗುವುದಿಲ್ಲ ಎಂದು ನಾವು ಭಾವಿಸುತ್ತೇವೆ.

ವಿವಿಧ ಸಮಾಜವಾದಿ ದೇಶಗಳ ನಡುವೆ ಕಲಹದ ಬೆಂಕಿಗೆ ಗಾಳಿಹಾಕುವುದಕ್ಕೆ, ವಿಯೆಟ್ನಾಂ, ಕಂಪೂಚಿಯ ಮತ್ತು ಲಾವೋಸ್‌ಗಳ ಮಹತ್ತಾದ ವಿಜಯಗಳನ್ನು ತುಳಿಯುವುದಕ್ಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸೋವಿಯೆತ್ ದೇಶ ಮತ್ತು ಚೀನದ ಜನತಾ ಗಣರಾಜ್ಯ ಈ ಎರಡು ಬೃಹತ್ ಸಮಾಜವಾದಿ ದೇಶಗಳ ನಡುವಿನ ಅಪಾಯಕಾರಿ ಕಲಹವನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ಚೀನ ಮತ್ತು ವಿಯೆಟ್ನಾಂ ಯುದ್ಧವೂ ಸೇರಿದಂತೆ ಇಂಡೋ-ಚೀನ ಪರ್ಯಾಯದ್ವೀಪದ ಬೆಳವಣಿಗೆಗಳು ತಮಗೆ ದೇವರೇ ಕಳಿಸಿದ ಅವಕಾಶವಾಗಿದೆಯೆಂದು, ಅಮೆರಿಕದ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ಭಾವಿಸಿವೆ.

ವಿಯೆಟ್ನಾಂ ದೇಶದ ಮೇಲೆ ಚೀನ ನಡೆಸಿದ ಯುದ್ಧದ ಬಗ್ಗೆ ತನ್ನ ವಿರೋಧವನ್ನು ಸ್ಪಷ್ಟವಾಗಿ ಸೂಚಿಸಿದ ಭಾರತ ಸರ್ಕಾರವು, ಕಂಪೂಚಿಯದ ಹೊಸ ಸರಕಾರಕ್ಕೆ ಮಾನ್ಯತೆ ನೀಡುವುದರ ಬಗ್ಗೆ ಹೊರಳು ಮಾತನ್ನಾಡುತ್ತಿದೆ. ಕಂಪೂಚಿಯದ ಹೊಸಸರ್ಕಾರವು ದೃಢವಾಗಿ ನಿಂತರೆ ಮಾತ್ರ ಮಾನ್ಯತೆ ನೀಡುತ್ತೇವೆ ಎಂದು ಅದು ಹೇಳಿರುವುದು ಯಾರಿಗೂ ಸಮಾಧಾನ ತರುವಂಥದ್ದಲ್ಲ. ಒಂದು ಸರ್ಕಾರದ ದೃಢತೆಯ ಪ್ರಶ್ನೆಯು ಭಾರತ ಸರ್ಕಾರಕ್ಕೆ ಅನುಕೂಲದ ಮತ್ತು ಒತ್ತಾಯದ ವಿಚಾರವಾಗಿಬಿಟ್ಟಿದೆ.

ಇರುವ ಸಂಗತಿ ಏನೆಂದರೆ, ಸಾಮ್ರಾಜ್ಯಶಾಹಿಗಳು ಮತ್ತು ಅಧಿಕ ಸಂಖ್ಯೆಯ ಅಲಿಪ್ತ ದೇಶಗಳು ಒಂದು ಕಡೆ, ಸೋವಿಯೆತ್ ದೇಶ, ವಿಯೆಟ್ನಾಂ ಮತ್ತು ಇತರ ಸಮಾಜವಾದಿ ಮತ್ತು ಅಲಿಪ್ತ ದೇಶಗಳು ಇನ್ನೊಂದು ಕಡೆ ಹೀಗೆ ಭಾರತ ಸರಕಾರವು ಅನೇಕ ತರದ ಬಲವಾದ ಎಳೆತಗಳಿಗೆ ಸಿಕ್ಕಿಕೊಂಡಿದೆ. ಚೀನದ ಜೊತೆ ಸಾಧ್ಯವಾದರೆ ಸಂಬಂಧಗಳನ್ನು ಸರಳಿಕರಿಸುವ ಮತ್ತು ಒಂದು ಮಟ್ಟಕ್ಕಿಂತ ಜಾಸ್ತಿ ಅದನ್ನು ವಿರೋಧಿಸದಿರುವ ಬಯಕೆಗಳಿಂದ, ಅದು ಅಸ್ಪಷ್ಟವಾದ ಹೇಳಿಕೆಗಳನ್ನು ಕೊಟ್ಟಿರಬೇಕು. ಆದರೆ ಈ ವಿಚಾರದಲ್ಲಿ ಭಾರತ ಸರ್ಕಾರದ ನಿಲುವು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತಿದೆ. ಇದು ಸರಿಯಾದ ರಾಜನೀತಿಯೂ ಅಲ್ಲ ಅಥವಾ ಇಂಡೋ-ಚೀನದ ರಾಜ್ಯಗಳ ಪರಿಸ್ಥಿತಿ ಸುಧಾರಿಸುವುದರಲ್ಲಿ ಅದು ಸಹಾಯವನ್ನು ಮಾಡುವುದೂ ಇಲ್ಲ ಎಂದು ನಾವು ಖಚಿತವಾಗಿ ಅಭಿಪ್ರಾಯಪಡುತ್ತೇವೆ.

**ಎಂ. ಬಸವಪುನ್ನಯ್ಯ**

ಕಂಪೂಚಿಯದ ಹೊಸ ಸರ್ಕಾರ ಮತ್ತು ಕಂಪೂಚಿಯ ವಿಯೆಟ್ನಾಂಗಳ ಹೊಸ ಸಂಬಂಧಗಳು ಈಗ ದೃಢವಾಗಿ ನಿಂತಿವೆ. ಈ ಹೊಸ ಸಂಬಂಧಗಳನ್ನು ಬಲತ್ಕಾರವಾಗಿ ಬದಲಾಯಿಸುವ ಪ್ರಯತ್ನಗಳು, ಅಂಥ ಬಲತ್ಕಾರಕ್ಕೆ ಯಾವ ಕಾರಣಗಳನ್ನು ಬೇಕಾದರೂ ಕೊಡಲಿ, ಅಂಥದೆಲ್ಲವೂ ಭಯಂಕರ ಪರಿಣಾಮಗಳನ್ನು ತರುವಷ್ಟು ಅಪಾಯಕಾರಿಯಾಗಿರುತ್ತವೆ.

**ಯಾವ ದೇಶವೂ ಪೋಲೀಸರಂತೆ ವರ್ತಿಸಲು ಸಾಧ್ಯವಿಲ್ಲ :**

ಕಂಪೂಚಿಯ ಮತ್ತು ಲಾವೋಸ್‌ಗಳ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸುವುದಕ್ಕೆ ಚೀನದ ಕಮ್ಯುನಿಸ್ಟ್ ಸರ್ಕಾರವಾಗಲಿ ಇನ್ನಾವುದೇ ಸರ್ಕಾರವಾಗಲಿ ಪೋಲೀಸರ ಪಾತ್ರವನ್ನು ವಹಿಸುವುದು ಸಾಧ್ಯವಿಲ್ಲ. ಅಲ್ಲದೆ, ಎಷ್ಟು ಕಡಿಮೆ ಜನಸಂಖ್ಯೆಯಿರಲಿ, ಮಿಲಿಟರಿ ಶಕ್ತಿ ಎಷ್ಟು ಬಲಹೀನವಾಗಿಯೇ ಇರಲಿ, ಆ ದೇಶಗಳ ಜೀವನದ ಬಗ್ಗೆ ಬೇರೆ ಯಾವ ದೇಶವೇ ಆಗಲಿ ಆದೇಶಗಳನ್ನು ಕೊಡಬಲ್ಲಂಥ ಯುಗದಲ್ಲಿ ನಾವು ಇಲ್ಲ. ಮೂಲಭೂತವಾಗಿ ಬದಲಾಗಿರುವ ತ್ವರಿತಗತಿಯಲ್ಲಿ ಬದಲಾಗುತ್ತಿರುವ ಜಾಗತಿಕ ಮಟ್ಟದ ವರ್ಗಸಂಬಂಧಗಳು ಯಾವ ದೇಶಕ್ಕಾಗಲಿ ಅದೆಷ್ಟೇ ಸಣ್ಣದಾದ ಅಥವಾ ದೊಡ್ಡದಾದ ಇನ್ನೊಂದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಗಳನ್ನು ತುಳಿಯಲು ಅವಕಾಶಕೊಡುವುದಿಲ್ಲ, ಸಮಕಾಲೀನ ಜಗತ್ತಿನ ಇತಿಹಾಸವು ಎಲ್ಲರಿಗೂ ಕಲಿಸುತ್ತಿರುವ ಪಾಠವು ಇದೇ. ಯಾವುದೇ ವಿಚಾರದ ಬಗ್ಗೆ ತನ್ನದೇ ತೀರ್ಮಾನಗಳ ಆಧಾರದ ಮೇಲೆ ಯಾವ ದೇಶವೂ ಇನ್ನೊಂದು ದೇಶಕ್ಕೆ "ಪಾಠ ಕಲಿಸುವ" ಹಕ್ಕನ್ನು ಇತಿಹಾಸ ಕೊಟ್ಟಿಲ್ಲ.

ಇಂಡೋ-ಚೀನದ ವಿವಿಧ ದೇಶಗಳ ನಡುವೆ ಇರುವ ಎಲ್ಲ ಭಿನ್ನಾಭಿಪ್ರಾಯಗಳು ಮತ್ತು ಕಲಹಗಳು, ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸಮಾನತೆಯ ಆಧಾರದ ಮೇಲೆ ಪರಿಹಾರವಾಗುತ್ತವೆಂದು ಆಶಿಸೋಣ, ಏಕೆಂದರೆ, ವಿಯೆಟ್ನಾಂ, ಕಂಪೂಚಿಯ ಮತ್ತು ಲಾವೋಸ್, ಈ ಮೂರು ದೇಶಗಳೂ, ತಮ್ಮ ಮೂರು ದಶಕಗಳ ಹೋರಾಟದಲ್ಲಿ ಒಂದೇ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಸೋಲಿಸಿ, ಜನತೆಯ ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಸ್ಥಾಪಿಸಿವೆ. ಈ ಇಂಡೋ-ಚೀನ ದೇಶಗಳ ಅಂತರ-ದೇಶ ಸಮಸ್ಯೆಗಳಲ್ಲಿ ಸಮಾಜವಾದಿ ಚೀನ ಅಥವಾ ಸಮಾಜವಾದಿ ರಷ್ಯಗಳು ತಲೆಹಾಕಿ ಮಧ್ಯೆ ಪ್ರವೇಶಿಸಿದರೆ, ಬಹುಕಾಲದಿಂದ ಇರುವ ಚೀನಾ-ಸೋವಿಯೆತ್ ಕಲಹದ ಸೋಂಕನ್ನು ಈ ದೇಶಗಳಿಗೂ ತಗುಲಿಸಿದ ಹಾಗೆ ಆಗುತ್ತದೆ. ಇದರಿಂದ, ಸಮಾಜವಾದಿ ದೇಶಗಳ ನಡುವೆ ಇರುವ ಅನೈಕ್ಯತೆಯನ್ನು ಸಾಮ್ರಾಜ್ಯಶಾಹಿಯು ಉಪಯೋಗಿಸಿಕೊಳ್ಳಲು, ಸಮಾಜವಾದಿ ದೇಶಗಳ ಐಕ್ಯತೆಯನ್ನು ಒಡೆಯಲು ಮತ್ತು ವಿಶ್ವಬಂಡವಾಳವಾದ ಮತ್ತು ಸಾಮ್ರಾಜ್ಯಶಾಹಿಗಳ ಅವನತಿಯನ್ನು ಮುಂದಕ್ಕೆ ಹಾಕಲು ಸಹಾಯವಾದಂತಾಗುತ್ತದೆ.

20ವರ್ಷಗಳಿಂದ ಹೆಚ್ಚುತ್ತಿರುವ ಚೀನ-ಸೋವಿಯತ್ ಕಲಹವೇ ಈ ಚೀನ-ವಿಯೆಟ್ನಾಂ ಯದ್ಧದ ಮೂಲ ಕಾರಣ ಎಂದು ನಾವು ಗುರುತಿಸಿದ್ದೇವೆ. ಇದು, ನಾವು ಹಿಂದಿನ ಲೇಖನದಲ್ಲಿ ಹೇಳಿದ್ದ ವಿಷಯವಾದ, ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು, ವಿಶ್ವಕಮ್ಯುನಿಸ್ಟ್ ಚಳುವಳಿಯಲ್ಲಿ ಇರುವ ಬಲಪರಿಷ್ಕರಣವಾದದ ವಿರುದ್ಧ ಹೂಡಿದ್ದ ಹೋರಾಟವು, ಈಗ ಉಗ್ರವಾಮವಾದ ಮತ್ತು ಪೆಟ್ಟಿಬೂರ್ಜ್ವಾ ಅರಾಜಕತೆಯ ಕಡೆಗೆ ಜಾರುತ್ತಿದೆ ಎಂಬ ಅಂಶಕ್ಕೇ ಮತ್ತೆ ಬರುವಂತೆ ಮಾಡುತ್ತದೆ. ಹೀಗೆ ಹೇಳುವಾಗ, ವಿಶ್ವಕಮ್ಯುನಿಸ್ಟ್ ಚಳುವಳಿಯಲ್ಲಿ ಬಲಪರಿಷ್ಕರಣವಾದ ಇರುವುದನ್ನು ನಾವು ಮರೆಯುತ್ತಿಲ್ಲ ಅಥವಾ ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರನ್ನು ಉಗ್ರವಾಗಿ ಟೀಕಿಸುವವರೆಲ್ಲರೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಎಂದೂ ನಂಬಿಲ್ಲ. ಚರಿತ್ರೆಯು ವಿಪುಲವಾಗಿ ತೋರಿಸಿರುವ ಹಾಗೆ ಮತ್ತು ನಮ್ಮ ಸ್ವಂತ ಅನುಭವವೂ ಹೇಳಿಕೊಟ್ಟಿರುವ ಹಾಗೆ, ಬಲ ಅಥವಾ ಎಡ ಪರಿಷ್ಕರಣವಾದದ ವಿರುದ್ಧ ಹೋರಾಟವನ್ನು ಯಾವಾಗಲೂ ಸರಿಯಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಿಲುವಿನಿಂದಲೇ ನಡೆಸಬೇಕಾಗಿಲ್ಲ, ಅಲ್ಲದೆ, ಒಂದು ಅಡ್ಡಮಾರ್ಗದ ವಿರುದ್ಧ ಹೋರಾಡುವಾಗ ಅದಕ್ಕೆ ವಿರೋಧವಾದ ಇನ್ನೊಂದು ಮಾರ್ಕ್ಸ್‌ವಾದ-ಲೆನಿನ್‌ವಾದದ ಅಡ್ಡಮಾರ್ಗದೊಡನೆಯೂ ಹೋರಾಡಬೇಕಾಗಿಲ್ಲವೆಂಬ ಭರವಸೆಯಿಲ್ಲ. ಬಲಪರಿಷ್ಕರಣವಾದವನ್ನು ಎಡಪಂಥವಾದದಿಂದ ಹೊಡೆದೋಡಿಸಲು ಸಾಧ್ಯವಿಲ್ಲ ಅಥವಾ ಎಡಪಂಥವಾದವನ್ನು ಬಲಪರಿಷ್ಕರಣವಾದದಿಂದ ನಿರ್ಮೂಲಮಾಡಲಾಗುವುದಿಲ್ಲ. ಈ ಎರಡೂ ಅಡ್ಡದಾರಿಗಳ ವಿರುದ್ಧ ಒಂದು ಸರಿಯಾದ ಮಾರ್ಕ್ಸ್‌ವಾದ-ಲೆನಿನ್‌ವಾದ ಆಧಾರಿತ ನೀತಿಯೊಡನೆ ಹೋರಾಟಮಾಡಬೇಕು.

ಸೋವಿಯೆತ್ ದೇಶವು ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸುವ ಹೋರಾಟದಲ್ಲಿ ಆಸಕ್ತಿ ತೋರಿಸುತ್ತಿಲ್ಲ ಮತ್ತು ಸಾಮ್ರಾಜ್ಯಶಾಹಿ ಅಪಾಯಕಾರಿಯಲ್ಲವೆಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತಿದೆ ಎಂಬ ಆಪಾದನೆಗಳ ಆಧಾರದ ಮೇಲೆ, "ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು 1960ರ ಆರಂಭದಲ್ಲಿ, ಸೋವಿಯೆತ್ ದೇಶದ ಕಮ್ಯುನಿಸ್ಟ್ ಪಕ್ಷವನ್ನೂ ಅದರ ನಾಯಕತ್ವವನ್ನೂ ಟೀಕಿಸತೊಡಗಿದರು. ಚೀನದ ಕಮ್ಯುನಿಸ್ಟ್ ಸಾಹಿತ್ಯವನ್ನೇ ಇಲ್ಲಿ ವಾಚಿಸುವುದಾದರೆ, "ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳು, ಮಿಲಿಟರಿ ಘಟಕಗಳನ್ನು ರೂಪಿಸುವುದರ ಮೂಲಕ, ಮಿಲಿಟರಿ ನೆಲೆಗಳನ್ನು ಸ್ಥಾಪಿಸುವುದರ ಮೂಲಕ, 'ಫೆಡರೇಷನ್ನುಗಳು' ಅಥವಾ 'ಕಮ್ಯೂನಿಟಿಗಳ'ನ್ನು ಸ್ಥಾಪಿಸುವುದರ ಮೂಲಕ ಮತ್ತು ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸುವುದರ ಮೂಲಕ ವಸಾಹತುದೇಶಗಳನ್ನು ಮತ್ತು ಸ್ವಾತಂತ್ರ್ಯವನ್ನು ಈಗಾಗಲೇ ಘೋಷಿಸಿಕೊಂಡಿರುವ ದೇಶಗಳನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುತ್ತಿವೆ. ಆರ್ಥಿಕ 'ಸಹಾಯ' ಮತ್ತಿತರ ದಾರಿಗಳ ಮೂಲಕ ಈ ದೇಶಗಳನ್ನು ತಮ್ಮ ವಸ್ತುಗಳಿಗೆ ಒಳ್ಳೆಯ ಮಾರುಕಟ್ಟೆಗಳನ್ನಾಗಿ, ಕಚ್ಚಾ ವಸ್ತುಗಳ ಮೂಲಗಳನ್ನಾಗಿ ಮತ್ತು ತಮ್ಮ ಬಂಡವಾಳ ರಫ್ತಿನ ನೆಲೆಗಳನ್ನಾಗಿ ಮಾರ್ಪಡಿಸಿ, ಈ ದೇಶಗಳ ಸಂಪತ್ತನ್ನು ಲೂಟಿಮಾಡಿ ಅವುಗಳ ರಕ್ತವನ್ನು ಹೀರುತ್ತಿವೆ" ಎಂದು ಚೀನ ಸೂಚಿಸಿದೆ. "ಹೊಸವಸಾಹತುಶಾಹಿಯನ್ನು ವಿಸ್ತರಿಸುವುದರಲ್ಲಿ ಅಮೆರಿಕ ತುಂಬಾ ಉತ್ಸಾಹಿಯಾಗಿ ಕುಟಿಲವಾಗಿ ಕೆಲಸಮಾಡುತ್ತಿದೆ. ಈ ಸಾಧನದ ಮೂಲಕ ಅಮೆರಿಕದ ಸಾಮ್ರಾಜ್ಯಶಾಹಿಗಳು, ವಸಾಹತುಗಳನ್ನು ಕಸಿದುಕೊ

[5ನೇ ಪುಟ ನೋಡಿ]

# ೧೧೪ ದೇಶಗಳಲ್ಲಿ ಅಮೆರಿಕಾ ಸೈನ್ಯದ ಹೆಚ್ಚುವರಿ

ಎರಡನೇ ಮಹಾಯುದ್ಧದ ನಂತರ 1945 ಫೆಬ್ರವರಿ 4 ರಿಂದ 11ನೇ ತಾರೀಖಿನವರೆಗೆ ನಡೆದ "ಯಾಲ್ಟಾ" ಸಮಾವೇಶದಲ್ಲಿ ಅಗ್ರನಾಯಕರಾದ ಬ್ರಿಟಿಷ್ ಪ್ರಧಾನಿ ಚರ್ಚಿಲ್, ಅಮೆರಿಕಾ ಅಧ್ಯಕ್ಷ ರೂಜ್‌ವೆಲ್ಟ್ ಮತ್ತು ಸ್ಟಾಲಿನ್‌ರ ಸಮ್ಮುಖದಲ್ಲಿ ನಡೆದ ಮಾತುಕತೆಯಲ್ಲಿ ಚರ್ಚಿಲ್‌ರು "ನಿಮ್ಮ ಸೈನಿಕದಳಗಳು ಪ್ರಪಂಚದಲ್ಲೆಲ್ಲಾ ಎಷ್ಟು ದಿನಗಳವರೆಗೆ ಇರುತ್ತವೆ" ಎಂದು ರೂಜ್‌ವೆಲ್ಟ್‌ರನ್ನು ಕೇಳಿದರು. ಅದಕ್ಕೆ "ಇನ್ನು ಎರಡು ವರ್ಷಗಳಲ್ಲಿ ಹಿಂದಕ್ಕೆ ಕರೆಸಿಕೊಳ್ಳುತ್ತೇನೆ" ಎಂದು ಅವರು ಉತ್ತರಿಸಿದ್ದರು. ಆದರೆ 34 ವರ್ಷ ಕಳೆದಿದ್ದರೂ ಸೈನ್ಯವನ್ನು ಅಮೆರಿಕಾ ಹಿಂದಕ್ಕೆ ಕರೆಸಿಕೊಂಡಿಲ್ಲ. ಎಷ್ಟೋ ಜನ ಅಧ್ಯಕ್ಷರು ಬಂದರು, ಹೋದರು. ಆದರೂ ಇಂದಿಗೂ ಅಮೆರಿಕಾದ ಸೈನಿಕದಳಗಳು ವಾಪಸ್ಸಾಗಿಲ್ಲ. ಅಮೆರಿಕಾದ ಸಾಮ್ರಾಜ್ಯಶಾಹಿಗಳು ಇತರ ದೇಶಗಳ ಮೇಲೆ ಬಲಪ್ರಯೋಗಮಾಡಿ ತಮ್ಮ ಸ್ವಪ್ರಯೋಜನಗಳಿಗೋಸ್ಕರ ಕುತಂತ್ರಗಳನ್ನು ನಡೆಸುತ್ತಿದ್ದಾರೆ ಎಂಬುದಕ್ಕೆ ಇದೊಂದು ಉದಾಹರಣೆ ಸಾಕು.

1933ರಲ್ಲಿ ಅಮೆರಿಕಾ ಸೈನಿಕದಳಗಳು ಮೂರು ಹೊರದೇಶಗಳಲ್ಲಿ ಮಾತ್ರ ಇದ್ದವು. 1949ರ ಹೊತ್ತಿಗೆ ಉತ್ತರ ಅಟ್ಲಾಂಟಿಕ್ ಮತ್ತು ಯೂರೋಪ್ ದೇಶಗಳಲ್ಲೆಲ್ಲಾ ತುಂಬಿ 39 ದೇಶಗಳಲ್ಲಿ ಸೈನಿಕದಳಗಳು ಬೀಡುಬಿಟ್ಟವು. ಇಂದು ಅಮೆರಿಕಾ ಸೈನಿಕರು ಜಗತ್ತಿನ 114 ದೇಶಗಳಲ್ಲಿ ಇದ್ದಾರೆ. ಅಮೆರಿಕಾಗೆ ಸೇರಿದ ಪ್ರತಿನಾಲ್ಕು ಸೈನಿಕರಲ್ಲಿ ಒಬ್ಬ ವಿದೇಶದಲ್ಲಿ ಇದ್ದಾನೆ. ಹೀಗೆ ಎಲ್ಲಾ ದೇಶಗಳಲ್ಲಿ ತನ್ನ ಸೈನಿಕರನ್ನು ಇಡುವುದರಲ್ಲಿ ಅಮೆರಿಕಾ ಸಾಮ್ರಾಜ್ಯವಾದಿಗಳ ಉದ್ದೇಶವೇನು?

ಅಮೆರಿಕಾ ತನ್ನ ಸೈನಿಕದಳಗಳನ್ನು ಕ್ರಮವಾಗಿ ಹೆಚ್ಚಿಸುತ್ತಲೇ ಇದೆ ಎಂಬುದಕ್ಕೆ ಅಮೆರಿಕದ ಸ್ಟೇಟ್ ಡಿಪಾರ್ಟ್‌ಮೆಂಟಿನ ಈ ಪಟ್ಟಿಯಿಂದ ತಿಳಿಯುತ್ತದೆ.

ಯೂರೋಪಿನ ದೇಶಗಳಲ್ಲಿ

| | ಮೊದಲು ಇದ್ದ ಸೈನ್ಯ | ಈಗ ಸೇರಿಸಿದ್ದು |
|---|---|---|
| ಪ. ಜರ್ಮನಿ | 2,34300 | 9800 |
| ಇಟಲಿ | 12110 | 1900 |
| ಸ್ಪೆಯಿನ್ | 8800 | |
| ಟರ್ಕಿ | 4800 | |
| ಗ್ರೀಸ್ | 3700 | |
| ಐಸ್‌ಲ್ಯಾಂಡ್ | 2800 | |
| ಫೆದರ್‌ಲ್ಯಾಂಡ್ಸ್ | 2200 | |
| ಬೆಲ್ಜಿಯಂ | 2000 | |
| ಪೋರ್ಚುಗಲ್ | 1400 | |
| ಇತರೆ ದೇಶಗಳು | 800 | |
| ಒಟ್ಟು ಮೊತ್ತ | 330000 | |
| ಒಟ್ಟು ಹೆಚ್ಚಿಸಿದ್ದು | | 16900 |

ಪೆಸಿಫಿಕ್ ಮಹಾಸಮುದ್ರ ದೇಶಗಳಲ್ಲಿ

| | ಇದ್ದದ್ದು | ಹೆಚ್ಚಿಸಿದ ಸೈನ್ಯ |
|---|---|---|
| ಜಪಾನ್ | 45900 | |
| ದ. ಕೊರಿಯಾ | 14600 | 1500 |
| ಫಿಲಿಫೈನ್ಸ್ | 14400 | |
| ಟೈವಾನ್ | 800 | |
| ಆಸ್ಟ್ರೇಲಿಯಾ | 700 | |
| ಮಿಡ್ವೆ | 400 | |
| ಇತರೆ ದೇಶಗಳು | 200 | |
| ಇದರಲ್ಲಿ ನೌಕಾದಳ | 25900 | |
| ಒಟ್ಟು | 138300 | |

ಒಂದು ಬಾರಿ ಕಡಿಮೆ ಮಾಡಿ ಮತ್ತೆ ಹೆಚ್ಚಿಸಿರುವ ದೇಶಗಳು:–

| | |
|---|---|
| ಲಾಟಿನ್ ಅಮೆರಿಕಾ | |
| ಪನಾಮ ಕಾಲುವೆ | 9200 |
| ಪ್ಯೂಟೋರಿಕಾ | 4000 |
| ಗ್ವಾಟೆಮಾಲಾ | 2300 |
| ಹೆಚ್ಚಿಸಿರುವ ಸಂಖ್ಯೆ | 15500 |
| ಡಿಯಾಗೋಗಾರ್ಸಿಯ | 1200 |
| ಇರಾನ್ | 900 |

ಇರಾನ್‌ನಲ್ಲಿ ಸುಮಾರು 40000 ಮಿಲಿಟರಿ ಸಲಹೆಗಾರರು, ನಿಪುಣರು ಇರುವ ವಿಚಾರವನ್ನು ಫೆಂಟಗಾನ್ ಪಟ್ಟಿಯಲ್ಲಿ ಉದಾಹರಿಸಿಲ್ಲ.

| | |
|---|---|
| ಕೆನಡಾ | 700 |
| ಇತರೆ ದೇಶಗಳು | 2500 |

ದಿನನಿತ್ಯ ಜಗತ್ತಿನಲ್ಲೆಲ್ಲಾ ಸಂಚಾರದಲ್ಲಿರುವ ಸೈನಿಕದಳಗಳು 3400, ಇದಕ್ಕೆ ಈಗ 6600 ಸೈನ್ಯ ಹೆಚ್ಚಿಸಲಾಗಿದೆ. ಹೀಗೆ ಅಮೆರಿಕಾ ಸಾಮ್ರಾಜ್ಯಶಾಹಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಸೈನ್ಯ ಹೆಚ್ಚಿಸುತ್ತಿದ್ದಾರೆ.

(ಆಧಾರ: ಪ್ರಜಾಶಕ್ತಿ)

[4ನೇ ಪುಟದಿಂದ]

ಳ್ಳುವುದಕ್ಕೆ, ಇತರ ಸಾಮ್ರಾಜ್ಯಶಾಹಿ ಪ್ರಭಾವದಲ್ಲಿರುವ ಪ್ರದೇಶಗಳನ್ನು ಪಡೆಯುವುದಕ್ಕೆ ಮತ್ತು ತನ್ನ ವಿಶ್ವ ಹಿಡಿತವನ್ನು ಸ್ಥಾಪಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಈ ಹೊಸವಸಾಹತುಶಾಹಿಯು ವಸಾಹತುಶಾಹಿಯ ಅತ್ಯಂತ ಮಾರಕವಾದ ಮತ್ತು ಅಪಾಯಕಾರಿ ರೂಪ." (ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಸಾಮಾನ್ಯನೀತಿಯ ಬಗ್ಗೆ ಚರ್ಚೆ, ಪುಟ 190)

ವಿಶ್ವಸಾಮ್ರಾಜ್ಯಶಾಹಿ ಬಗೆಗಿನ ಈ ವಿಮರ್ಶೆಯನ್ನು ಸಂಪೂರ್ಣವಾಗಿ ಕೈಬಿಟ್ಟು, ಸೋವಿಯೆತ್ ದೇಶವನ್ನು "ಸಮಾಜವಾದಿ-ಸಾಮ್ರಾಜ್ಯಶಾಹಿ" ಎಂದು ಕರೆದು, ಅದರ ವಿರುದ್ಧ ಜಗತ್ತಿನಾದ್ಯಂತ, ಎಲ್ಲರೂ, ಪೂರ್ವ ಮತ್ತು ಪಶ್ಚಿಮದ ಎಲ್ಲ ಸಾಮ್ರಾಜ್ಯಶಾಹಿ ಶಕ್ತಿಗಳು, ಅಲಿಪ್ತದೇಶಗಳು ಎಲ್ಲವೂ ಚೀನದ ಜನತಾಗಣರಾಜ್ಯದ ಜೊತೆ ಸೇರಿ ಹೋರಾಟ ಮಾಡಬೇಕೆಂದು ಹೇಳುವುದು ಆಶ್ಚರ್ಯಕರವೂ ದುಷ್ಟತನವೂ ಆಗಿದೆಯಲ್ಲವೆ ?

**ಸಂಘರ್ಷಗಳನ್ನು ಕುರಿತು :**

"ಸಮಕಾಲೀನ ಜಗತ್ತಿನಲ್ಲಿರುವ ಮೂಲಭೂತ ಸಂಘರ್ಷಗಳೆಂದರೆ, ಸಮಾಜವಾದಿ ಶಿಬಿರ ಮತ್ತು ಸಾಮ್ರಾಜ್ಯಶಾಹಿ ಶಿಬಿರಗಳ ನಡುವೆ, ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕವರ್ಗ ಮತ್ತು ಬೂರ್ಜ್ವಾವರ್ಗದ ನಡುವೆ, ದಬ್ಬಾಳಿಕೆಗೊಳಗಾದ ದೇಶಗಳು ಮತ್ತು ಸಾಮ್ರಾಜ್ಯಶಾಹಿಯ ನಡುವೆ, ಇರುವ ಸಂಘರ್ಷಗಳು, ಸಾಮ್ರಾಜ್ಯಶಾಹಿ ದೇಶಗಳಲ್ಲಿ ಪರಸ್ಪರ ಇರುವ ಸಂಘರ್ಷಗಳು ಮತ್ತು ಏಕಸ್ವಾಮ್ಯ ಬಂಡವಾಳಶಾಹಿ ಗುಂಪುಗಳ ನಡುವೆ ಇರುವ ಸಂಘರ್ಷಗಳು". "ಸಮಕಾಲೀನ ಜಗತ್ತಿನಲ್ಲಿರುವ ವಿವಿಧ ಬಗೆಯ ಸಂಘರ್ಷಗಳು, ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಗಳ ವಿಶಾಲ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿವೆ. ಈ ಪ್ರದೇಶಗಳು ಸಾಮ್ರಾಜ್ಯಶಾಹಿ ಆಡಳಿತದ ಅತ್ಯಂತ ದುರ್ಬಲ ಪ್ರದೇಶಗಳು. ಸಾಮ್ರಾಜ್ಯಶಾಹಿಗೆ ನೇರ ಪೆಟ್ಟುಗಳನ್ನು ಕೊಡುವಂಥ ವಿಶ್ವಕ್ರಾಂತಿಯ ಬಿರುಗಾಳಿಯ ನೆಲೆಗಳು" (ಅದೇ ಪುಟ 201) ಎಂದು ಚೀನದ ಕಮ್ಯುನಿಸ್ಟ್ ಪಕ್ಷದ ಮುಖಂಡರು ಹೇಳಿದ್ದಾರೆ.

## ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಿಂದ

## ಸಾಮ್ರಾಜ್ಯಶಾಹಿಯ ಜೊತೆ ಐಕ್ಯ ಕಾರ್ಯಾಚರಣೆಗೆ

ಈ ಮೇಲಿನ ಪರಿಶೀಲನೆಯನ್ನು ಅಧಿಕೃತವಾಗಿ ಪ್ರಕಟಿಸಿದ ನಾಲ್ಕು ವರ್ಷಗಳ ಬಳಿಕ 1969 ರಲ್ಲಿ, ಜಗತ್ತಿನ ಸಾಮಾಜಿಕ ಸಂಘರ್ಷಗಳ ಇಡೀ ವಿಮರ್ಶೆಯನ್ನು ತಲೆಕೆಳಗು ಮಾಡಿ, ಚೀನದ ಕಮ್ಯುನಿಸ್ಟ್ ಪಕ್ಷದ ಒಂಭತ್ತನೇ ಅಧಿವೇಶನದಲ್ಲಿ ಸಂಪೂರ್ಣವಾಗಿ ಭಿನ್ನವಾದ ವಿಶ್ವದ ಸಂಘರ್ಷದ ಚಿತ್ರಣವನ್ನು ಕೊಡಲಾಯಿತು. ಲಿನ್‌ಪಿಯಾವೋ ಅವರನ್ನು "ಮಾವೋತ್ಸೆತುಂಗರ ಹತ್ತಿರದ ಸಂಗಾತಿ ಮತ್ತು ಉತ್ತರಾಧಿಕಾರಿ" ಎಂದು ಘೋಷಿಸಿದ ಈ ಅಧಿವೇಶನವು ಸೋವಿಯೆತ್ ನಾಯಕರು "ಕಾರ್ಮಿಕ ಸರ್ವಾಧಿಕಾರದ ಮೊದಲ ದೇಶವನ್ನು ಶಾಂತಿಯುತ ವಿಕಸನದ ಮೂಲಕ ಒಂದು ಬೂರ್ಜ್ವಾ ಸರ್ವಾಧಿಕಾರದ ಕರಾಳ ಫ್ಯಾಸಿಸ್ಟ್ ದೇಶವನ್ನಾಗಿ ಮಾರ್ಪಡಿಸಿದ್ದಾರೆ" ಎಂದು ವರ್ಣಿಸಿತು.

ಚೀನದ ಕಮ್ಯುನಿಸ್ಟ್‌ಪಕ್ಷದ ಒಂಭತ್ತನೇ ಅಧಿವೇಶನವು ನೀಡಿದ ಪರಿಷ್ಕೃತ ವಿಶ್ವಸಂಘರ್ಷಗಳ ವಿವರಣೆಯ ಪ್ರಕಾರ "ದಬ್ಬಾಳಿಕೆಗೊಳಗಾದ ದೇಶಗಳು ಮತ್ತು ಸಾಮ್ರಾಜ್ಯಶಾಹಿ, ಸಮಾಜವಾದಿಸಾಮ್ರಾಜ್ಯಶಾಹಿ ದೇಶಗಳ ನಡುವೆ, ಬಂಡವಾಳಶಾಹಿ ಮತ್ತು ಪರಿಷ್ಕರಣವಾದಿ ದೇಶಗಳಲ್ಲಿ ಕಾರ್ಮಿಕ ವರ್ಗ ಮತ್ತು ಬೂರ್ಜ್ವಾವರ್ಗದ ನಡುವೆ, ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿಸಾಮ್ರಾಜ್ಯಶಾಹಿ ದೇಶಗಳ ನಡುವೆ, ಸಾಮ್ರಾಜ್ಯಶಾಹಿ ದೇಶಗಳ ನಡುವೆ, ಸಮಾಜವಾದಿ ದೇಶಗಳು ಮತ್ತು ಸಾಮ್ರಾಜ್ಯಶಾಹಿಯ ನಡುವೆ" ಸಂಘರ್ಷಗಳು ಇವೆ.

**ಸಂಪೂರ್ಣ ನಿರಾಕರಣೆ :**

1961ರ ಜೂನ್ ಒಂದರಂದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಪಾಲಿಟ್‌ಬ್ಯೂರೋವು, ಚೀನದ ಕಮ್ಯುನಿಸ್ಟ್‌ಪಕ್ಷದ ಒಂಭತ್ತನೇ ಅಧಿವೇಶನದ ಬಗ್ಗೆ ನೀಡಿದ ಹೇಳಿಕೆಯಲ್ಲಿ, ಚೀನದ ಮೇಲೆ ಹೇಳಿದ ವಿಶ್ವಸಂಘರ್ಷಗಳ ವಿವರಣೆಯನ್ನು ಪೂರ್ಣವಾಗಿ ನಿರಾಕರಿಸಿತ್ತು.

"ನಮ್ಮ ಅಭಿಪ್ರಾಯದಲ್ಲಿ, ಇದು ಒಂದು ಪ್ರಶ್ನೆಯ ಬಗ್ಗೆ ತನ್ನ ನೀತಿಯಲ್ಲಿ ಮಾಡಿದಬದಲಾವಣೆಯಾಗಲಿ ಅಥವಾ ಯಾವುದಾದರೊಂದು ಸಂಗತಿಗಳ ಬಗ್ಗೆ ಹೆಚ್ಚು ಅಥವಾ ಕಡಿಮೆ ಒತ್ತು ನೀಡಿರುವ ಪ್ರಶ್ನೆಯಾಗಲಿ ಅಲ್ಲ. 1963ರ ಸಾಮಾನ್ಯ ನೀತಿಯಲ್ಲಿ ಹೇಳಿದ ಮೊದಲಿನ ವರ್ಗವಿಮರ್ಶೆಯನ್ನು ಈಗ ಸಂಪೂರ್ಣವಾಗಿ ಪರಿತ್ಯಜಿಸಲಾಗಿದೆ. ಕಟುವಾಗಿ ಹೇಳುವುದಾದರೆ, ಸಮಕಾಲೀನ ಜಗತ್ತು ಮತ್ತು ಅದರ ಬೆಳವಣಿಗೆಗಳ ಬಗೆಗಿನ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪರಾಮರ್ಶೆಯನ್ನು ಇಲ್ಲಿ ಸಂಪೂರ್ಣ ಕೈಬಿಟ್ಟಂತಾಗಿದೆ".

ವಿಯೆಟ್ನಾಂದೇಶದ ಮೇಲೆ ಅಮೆರಿಕ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ದಾಳಿಯ ವಿರುದ್ಧ ಐಕ್ಯವಾಗಿ ಕ್ರಿಯಾಚರಣೆಮಾಡಲು ಆಹ್ವಾನಿಸಿದ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಸಲಹೆಯನ್ನು ಚೀನದ ಕಮ್ಯುನಿಸ್ಟ್ ನಾಯಕರು ತಿರಸ್ಕರಿಸಿದರು. ಅಲ್ಲದೆ "ಸಮಕಾಲೀನ ಜಗತ್ತಿನಲ್ಲಿ ಅಮೆರಿಕದ ವಿರೋಧಿ ಐಕ್ಯರಂಗದಲ್ಲಿ ಯಾವ ರಾಜಕೀಯ ಶಕ್ತಿಯು ಸೇರಬಹುದೆಂದು ನಿರ್ಣಯಿಸಬೇಕಾದರೆ ಅದು ಅಮೆರಿಕನ್ ಸಾಮ್ರಾಜ್ಯಶಾಹಿಯ ಪರವಾಗಿದೆಯೇ ಅಥವಾ ವಿರುದ್ಧವಾಗಿದೆಯೇ ಎಂಬುದೇ ನಿರ್ಣಾಯಕ ಅಂಶವಾಗಿದೆ. "ನಮ್ಮನ್ನು ಪ್ರತ್ಯೇಕಿಸುವ ವಿಚಾರಗಳು ಇವೆ. ಒಂದುಗೂಡಿಸುವ ವಿಚಾರವೇ ಇಲ್ಲ. ವಿರೋಧವಾದ ವಿಚಾರಗಳು ಇವೆ. ಇಬ್ಬರೂ ಒಪ್ಪಬಹುದಾದ ವಿಚಾರಗಳು ಇಲ್ಲ" ಆದ್ದರಿಂದ ಸೋವಿಯೆತ್ ದೇಶದೊಡನೆ ಐಕ್ಯಕಾರ್ಯಾಚರಣೆ ಮಾಡುವುದು ಸಾಧ್ಯವಿಲ್ಲ ಮುಂತಾಗಿ ಹೇಳಿದರು.

ಸಮಾಜವಾದಿ ಚೀನ ಮತ್ತು ಸಾಮ್ರಾಜ್ಯಶಾಹಿ ಅಮೆರಿಕಗಳ ನಡುವಿನ ಸಂಘರ್ಷವು ಈಗ ವಿರೋಧಾತ್ಮಕವಾಗಿರುವುದು ನಿಂತುಹೋಗಿದೆಯೇ ಮತ್ತು ಸೋವಿಯೆತ್ ದೇಶದ ವಿರುದ್ಧ ಹೋರಾಡಲು ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳೊಡನೆ ಐಕ್ಯಕಾರ್ಯಾಚರಣೆ ನಡೆಸುವುದು ಸಾಧುವೇ ಎಂಬ ಪ್ರಶ್ನೆಗಳನ್ನು ತಮ್ಮ ಸಂಘರ್ಷಗಳ ವಿಶಿಷ್ಟ ಸಿದ್ಧಾಂತಗಳನ್ನು ಗಟ್ಟಿಯಾಗ್ಯಿಘೋಷಿಸುತ್ತಿರುವ ಸದ್ಯದ ಚೀನ ಕಮ್ಯುನಿಸ್ಟ್ ಪಕ್ಷದ ನಾಯಕರಿಗೆ ಈಗ ನಾವು ಕೇಳೋಣವೇ?

1957ರ ಹೇಳಿಕೆ ಮತ್ತು 1960ರ 81 ಪಕ್ಷಗಳ ಮಾಸ್ಕೋ ಹೇಳಿಕೆಗಳನ್ನು ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು ತುಂಬಾ ಪ್ರಶಂಸಿಸಿದ್ದರು. ಈ ದಾಖಲೆಗಳನ್ನು "ಪರಸ್ಪರ ವಿಚಾರ ವಿನಿಮಯದ ಮೂಲಕ ಸರ್ವಾನುಮತದ ಅಭಿಪ್ರಾಯಗಳನ್ನು ರೂಪಿಸಿದ್ದಾಗಿ ದೆಂದೂ" ಈ ದಾಖಲೆಗಳು "ನಮ್ಮ ಯುಗದ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತವೆ, ಸಮಾಜವಾದಿ ಕ್ರಾಂತಿಯ, ಸಮಾಜವಾದಿ ರಚನೆಯ ಸಮಾನ ನಿಲುವುಗಳನ್ನು ತೋರಿಸುತ್ತವೆ. ಎಲ್ಲ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳಿಗೆ ಸಾಮಾನ್ಯ ನೀತಿಯನ್ನು ರೂಪಿಸುತ್ತವೆ" ಮತ್ತು ಇದು "ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಸಾಮಾನ್ಯ ಕಾರ್ಯಕ್ರಮ" ಹೇಳಿದ್ದರು. 1964-65ರ ತನಕ ಈ ನಿಲುವನ್ನೇ ಎತ್ತಿಹಿಡಿಯಲಾಗಿತ್ತು.

ಆದರೆ 1966ರ ವೇಳೆಗೆ 1957 ಮತ್ತು 60ರ ಈ ಎರಡೂ ದಾಖಲೆಗಳನ್ನು ಇಡಿಯಾಗಿ ನಿರಾಕರಿಸುವುದು ಆಶ್ಚರ್ಯವಲ್ಲವೇ? 1964-65ರ ವರೆಗೆ ವಿಶ್ವಕಮ್ಯುನಿಸ್ಟ್ ಚಳುವಳಿಯಲ್ಲಿದ್ದ ಇಡೀ ಜಗತ್ತಿನ ವರ್ಗಸಂಬಧಗಳು ಮತ್ತು ವರ್ಗಪರಾಮರ್ಶೆಯು ಒಂದೇ ವರ್ಷದಲ್ಲಿ ಹಳೆಯದಾಗಿ ಹೋಯಿತೆ? ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು ನೀಡಿರುವ ಹೊಸ ವಿವರಣೆಯು ಸಮಕಾಲೀನ ಜಗತ್ತಿನ ವರ್ಗವಾಸ್ತವಗಳೊಂದಿಗೆ ಹೊಂದಿಕೊಳ್ಳುತ್ತದೆಯೆ?

**ಮೂರು ಜಗತ್ತುಗಳ ಸಿದ್ಧಾಂತ :**

ಮೂರು ಜಗತ್ತುಗಳ ಸಿದ್ಧಾಂತವನ್ನು ಆಚರಣೆಯಲ್ಲಿ ಈಗ "ಎರಡು ಜಗತ್ತುಗಳ ಸಿದ್ಧಾಂತ"ವನ್ನಾಗಿ ಮಾಡಲಾಗಿದೆ. ಎಂದರೆ, ಸೋವಿಯೆತ್ ಸಮಾಜವಾದಿ ಸಾಮ್ರಾಜ್ಯಶಾಹಿ ಮತ್ತದರ ಬಾಲಬಡುಕರು ಶಾಂತಿ, ಸಮಾಜವಾದ ಮತ್ತು ಮಾನವಜನಾಂಗಕ್ಕೆ ಪ್ರಥಮಶ್ರೇಣಿಯ ಶತ್ರುಗಳಾಗಿದ್ದು ಒಂದು ಜಗತ್ತಿಗೆ ಸೇರಿದ್ದಾರೆ. ಎರಡನೇ ಜಗತ್ತಿನಲ್ಲಿ ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳು ಅಲಿಪ್ತ ದೇಶಗಳು ಚೀನದ ಜನತಾಗಣರಾಜ್ಯದ ಜೊತೆ ಸೇರಿ ಮೊದಲನೆಯದರ ಪಿಡುಗಿನ ವಿರುದ್ಧ ಹೋರಾಡುತ್ತಿದ್ದಾರೆ.

ಇದಕ್ಕಿಂತ ಅಸಂಬದ್ಧವಾದ ಮತ್ತು ವಿಚಿತ್ರವಾದ ವಿಚಾರವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ?

## ಕೊಡಗು ಜಿಲ್ಲಾಧಿಕಾರಿ ರಾಜೀನಾಮೆ ಕೊಡಲಿ

ತಿತಿಮತಿ ಅರಣ್ಯ ಪ್ರದೇಶದ ರೈತರು ತಾ॥ 2-4-79 ರಂದು ಕೊಡಗು ಜಿಲ್ಲಾಧಿಕಾರಿಯವರ ಕಛೇರಿಯ ಎದುರು ಧರಣಿ ಸತ್ಯಾಗ್ರಹ ನಡೆಸಿ, ತಮ್ಮನ್ನು ಅರಣ್ಯಪ್ರದೇಶದಿಂದ ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ ಮನವಿ ಪತ್ರವನ್ನು ಅರ್ಪಿಸಿದರು.

ಬಂಡವಾಳಗಾರರ ಹಿಡಿತದಲ್ಲಿ, ಅರಣ್ಯ ಇಲಾಖೆಯ ಅಧಿಕಾರಿಗಳ ಪ್ರಭಾವದಿಂದ ಬೆಳೆಯುತ್ತಿರುವ ಜಿಲ್ಲಾಧಿಕಾರಿಗಳು ಅಪ್ಪಟ ಸುಳ್ಳುಗಳನ್ನು ಹೇಳುವುದರ ಮೂಲಕ ಬಡರೈತರನ್ನು ವಂಚಿಸಲು ಯತ್ನಿಸಿದರು. ಆದರೆ ರೈತಪ್ರತಿನಿಧಿಗಳು ಸ್ಥಳದಿಂದ ಕದಲುವುದಿಲ್ಲವೆಂದು ಹೇಳಿ ಅನ್ಯಾಯದ ವಿರುದ್ಧ ಪ್ರತಿಭಟಿಸಿದರು.

ತಿತಿಮತಿ ರೈತರ ಸತ್ಯಾಗ್ರಹದ ಬಿಸಿ ಜಿಲ್ಲೆಯಾದ್ಯಂತ ಹಬ್ಬುತ್ತಿದೆ. ಹಲವಾರು ಕಡೆಗಳಿಂದ ರೈತರು ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಬೆಂಬಲ ಕೊಡುತ್ತಿದ್ದಾರೆ. ರೈತರು ಈಗ ಮರದ ಕೆಳಗೆ ಜೀವಿಸುತ್ತಿದ್ದಾರೆ. ಹೋರಾಟ ಮುಂದುವರೆಯುತ್ತಿದೆ. ಸರ್ಕಾರವು ಇನ್ನಾದರೂ ಬಡಜನರ ನ್ಯಾಯವಾದ ಬೇಡಿಕೆ ಈಡೇರಿಸಿ, ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಡೆಯಲಿ.

●

## ಶುಭ ವಿವಾಹ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಶೋಕನಗರ ಶಾಖೆಯ ಸದಸ್ಯರಾದ ಕಾಂ. ಕೆ. ನಾರಾಯಣ ಅವರ ಪುತ್ರಿ ಕುಮಾರಿ ಗಿರಿಜಾಕ್ಷಿ ಮತ್ತು ದಿ. ಬೆಳ್ಯಾಡರ ಪುತ್ರ ಮಹಾಬಲ ಅವರ ವಿವಾಹವು 2-4-79 ರಂದು ನಡೆಯಿತು. ವಿವಾಹದ ಸವಿನೆನಪಿಗಾಗಿ ವಧುವರರು ಪಕ್ಷಕ್ಕೆ 25 ರೂಗಳನ್ನು ನೀಡಿದ್ದಾರೆ. ವಧುವರರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶುಭಾಶಯಗಳು.

□

## ಹರ್ಬರ್ಟ್ ಇಂಡಿಯಾ ವಾರ್ಷಿಕ ದಿನೋತ್ಸವ

ಬೆಂಗಳೂರಿನ ಹರ್ಬರ್ಟ್ ಇಂಡಿಯಾ ಕಾರ್ಮಿಕ ಸಂಘದ ವಾರ್ಷಿಕದಿನೋತ್ಸವವನ್ನು ದಿನಾಂಕ 6-5-79ರಂದು ಹೋಟೆಲ್ ಬೃಂದಾವನದಲ್ಲಿ ನಡೆಸಲು ಈಚೆಗೆ ನಡೆದ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಮಾಡಿತು.

ಮುಖ್ಯ ಅತಿಥಿಯಾಗಿ ಸಮಾವೇಶಕ್ಕೆ CITU ಮುಖಂಡರಾದ ಕಾಂ. ಟಿ. ಎಸ್. ಅನಂತರಾವ್‌ರವರನ್ನು ಕರೆಯಬೇಕೆಂದು ತೀರ್ಮಾನಮಾಡಲಾಯಿತು.

●

## ಆರೆಸ್ಸೆಸ್ಸಿನ ಪ್ರತ್ಯೇಕತೆಯ ಹಿಂದೆ

[3ನೇ ಪುಟದಿಂದ]

ಒಂದುಗೂಡಿಸುವ, ಅದರಲ್ಲೂ ಬಹುಸಂಖ್ಯಾತರ ಗುಂಪುಗಳನ್ನು ಒಂದುಗೂಡಿಸುವ ರಾಜಕೀಯ ಅಥವಾ ಸಾಂಸ್ಕೃತಿಕ ಚಟುವಟಿಕೆಗಳು ರಾಷ್ಟ್ರೀಯ ಐಕ್ಯತೆಯ ಹೊರಗೇ ಉಳಿಯುತ್ತವೆ. ಜಾತ್ಯಾತೀತತೆಯು ಮತ್ತೊಂದು ವಿಷಯವನ್ನು ಒಳಗೊಂಡಿದೆ. ಏನೆಂದರೆ ಶತಮಾನಗಳಷ್ಟು ಪುರಾತನವಾದ ಜಾತಿಪದ್ಧತಿಯನ್ನು ನಾಶಗೊಳಿಸುವುದು, ವರ್ಣಾಶ್ರಮ ಧರ್ಮದ ವಿಸ್ತೃತ ವ್ಯವಸ್ಥೆಯ ಮೇಲ್ಜಾತಿ ಮತ್ತು ಕೀಳುಜಾತಿ ಎಂಬ ವಿಭಜನೆಯನ್ನು ನಾಶಗೊಳಿಸುವುದು. ಆರೆಸ್ಸೆಸ್‌ನ ದಿವಂಗತ ಸರಸಂಘಚಾಲಕ ಗೋಲ್ವಾಲ್ಕರ್‌ರವರು ಇಂತಹ ವಿಭಜನೆಯ ನಾಶವನ್ನು ವಿರೋಧಿಸುತ್ತಿದ್ದರು. ಇದೇ ಭಾರತದಲ್ಲಿ ಆಧುನಿಕ ಜಾತ್ಯಾತೀತ ಸಮಾಜದ ಬೆಳವಣಿಗೆಗೆ ದೊಡ್ಡ ಅಡ್ಡಿಯಾಗಿರುವುದು.

**ಮತ್ತೊಂದು ಅಗತ್ಯ :**

ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಮತ್ತೊಂದು ಅಗತ್ಯದ ಅಂಶವೆಂದರೆ ಭಾರತದ ಎಲ್ಲಾ ಆಧುನಿಕ ಭಾಷೆಗಳ ಸಮಾನತೆ. ಆದುದರಿಂದ ಹಿಂದಿಯನ್ನು ರಾಷ್ಟ್ರಭಾಷೆಯೆಂದು (ಉಳಿದವು ಪ್ರಾಂತೀಯ ಭಾಷೆಗಳೆಂದು) ಇತರ ಭಾಷೆಯವರ ಮೇಲೆ ಹೇರುವುದು ಹಾಗೂ ಹಿಂದಿ ಭಾಷೆಯ ಶ್ರೇಷ್ಠತೆಯನ್ನು ಸಾಧಿಸಲು ಪ್ರಯತ್ನಿಸುವುದು ಭಾರತದ ಬಹುಸಂಖ್ಯಾತ ಜನತೆಯ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತದೆ. ಆರೆಸ್ಸೆಸ್ ಮತ್ತು ಜನಸಂಘಗಳು ಹಿಂದಿ ಭಾಷೆಯ ಅಂಧಾಭಿಮಾನದ ವಿಕೃತ ಪ್ರತಿನಿಧಿಗಳು. ಆಧುನಿಕ ಭಾರತೀಯ ಭಾಷೆಗಳು, ಭಾಷಾವಾರು ರಾಜ್ಯಗಳ ರಾಷ್ಟ್ರೀಯ ಭಾಷೆಗಳಾಗಲು ಅಡ್ಡಿಯಾಗಿರುವ ಶಕ್ತಿಗಳು. ಇಂಗ್ಲೀಷ್ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಒಪ್ಪದಿರುವವರು. ಹಿಂದೂ ಧರ್ಮದ ಪುನರುದ್ಧಾರ, ಸಂಸ್ಕೃತ ಭಾಷೆಯನ್ನು ಭಾರತೀಯ ಸಂಸ್ಕೃತಿಯ ಸಂಕೇತವೆಂದು ಅದರ ಶ್ರೇಷ್ಠತೆಯನ್ನು ಪ್ರತಿಪಾದಿಸುವುದು, ಹಿಂದಿ ಭಾಷೆಯನ್ನು ಹಿಂದಿಯೇತರರ ಮೇಲೆ ಹೇರುವುದು- ಇಂತಹ ಆರೆಸ್ಸೆಸ್ ವಿಚಾರಧಾರೆಗಳ ವಿರುದ್ಧ ಜನಸಂಘದ ನಾಯಕರು ಹೋರಾಡಬೇಕಾಗಿದೆ. ಅವರು ಹಿಂದಿನ ಪರಂಪರೆಯನ್ನು ಬಿಡಲು ಸಿದ್ಧರಿರುವುದಾದರೆ ಇದನ್ನು ಮಾಡಲೇಬೇಕು. ಜನಸಂಘದ ನಾಯಕರು ತಿಳಿದುಕೊಳ್ಳಬೇಕಾದ ಮತ್ತೊಂದು ಅಂಶವೆಂದರೆ, ಆರೆಸ್ಸೆಸ್ಸಿನ ಜಾತೀಯತೆಯನ್ನು ಉಪಯೋಗಿಸಿಕೊಂಡೇ ಶ್ರೀಮತಿ ಇಂದಿರಾಗಾಂಧಿಯವರು ಆಳುವ ಪಕ್ಷವನ್ನು ಟೀಕಿಸುತ್ತಿರುವುದು. ಆ ಮೂಲಕ ಜನಗಳಿಗೆ ತಾನು ಜಾತ್ಯಾತೀತ ಎಂಬಂತೆ ಪ್ರದರ್ಶಿಸಲು ಹೊರಟಿದ್ದಾರೆ. ಆದ್ದರಿಂದ ಆರೆಸ್ಸೆಸ್ಸಿನ ಹಳೆಯ ವಿಚಾರಗಳನ್ನು ಬದಲಾಯಿಸದೆ ಜನಸಂಘದವರು, ತಮ್ಮನ್ನಾಗಲೀ, ಆರೆಸ್ಸೆಸ್ಸನ್ನಾಗಲಿ ಜನತೆಯಿಂದ ಪ್ರತ್ಯೇಕವಾಗುವುದನ್ನು ತಪ್ಪಿಸಲಾರರು. ಪ್ರಪಂಚದ ಯಾವ ಶಕ್ತಿಯೂ ಇದನು ತಡೆಯಲಾರದು. —

## ಸಿ. ಐ. ಟಿ. ಯು. ಸಂಘಗಳ ಸಭೆ

ಬೆಂಗಳೂರು ವೈಟ್‌ಫೀಲ್ಡ್ ಪ್ರದೇಶದ ಸಿ.ಐ.ಟಿ.ಯು. ಸಂಘಗಳ ಸಭೆಯನ್ನು ತಾ॥ 8-4-79ರಂದು ಬೆಳಿಗ್ಗೆ ಹತ್ತುಗಂಟೆಗೆ ಕೃಷ್ಣರಾಜಪುರದ ರೈಲ್ವೆ ಸ್ಟೇಷನ್ ಹತ್ತಿರವಿರುವ ಪುಷ್ಪಾಂಜಲಿ ಥಿಯೇಟರ್‌ನಲ್ಲಿ ನಡೆಸಲಾಯಿತು.

ಸಣ್ಣ ಕೈಗಾರಿಕೆಗಳಲ್ಲಿ ವೇತನವನ್ನು ಸರ್ಕಾರ ಈಗ ನಿಗದಿ ಮಾಡಿದ್ದು, ಇದನ್ನು ಜಾರಿಗೆ ತರುವಲ್ಲಿ ಮಾಲೀಕರು ಮತ್ತು ಬಂಡವಾಳಗಾರರು ಹಿಂದೆ ಮುಂದೆ ನೋಡಿದಲ್ಲಿ, ಕೆಲಸಗಾರರು ಒಟ್ಟಾಗಿ ಹೋರಾಟ ನಡೆಸುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮದರಾಸಿನಲ್ಲಿ ಏಪ್ರಿಲ್ 11 ರಿಂದ 15 ರವರೆಗೆ ಸೇರಲಿರುವ ಸಿ.ಐ.ಟಿ.ಯು. ನಾಲ್ಕನೇ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು.

●

## ಹೊಳಲ್ಕೆರೆಯಲ್ಲಿ ಎಸ್.ಎಫ್.ಐ.ಶಾಖೆ ಪ್ರಾರಂಭ

ತಾ 25-3-79ರಂದು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಶಾಖೆಯನ್ನು ಪ್ರಾರಂಭಿಸಲಾಯಿತು. ಚಿತ್ರದುರ್ಗಜಿಲ್ಲಾ ಎಸ್.ಎಫ್.ಐ. ಶಾಖೆ ಅಧ್ಯಕ್ಷ ಕಾಂ. ಜ್ಞಾನೇಶ್ವರ್ ಹಾಗೂ ಕಾಂ. ಆಂಜನಪ್ಪ ಕಾರ್ಯದರ್ಶಿ ಇವರುಗಳು ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಭಾಷಣಕಾರರಾಗಿ ಬಂದಿದ್ದರು. ಸಭೆಯಲ್ಲಿ ಸುಮಾರು ಇನ್ನೂರೈವತ್ತು ವಿದ್ಯಾರ್ಥಿಗಳು ಸೇರಿದ್ದರು.

ತಾಲ್ಲೂಕು ಸಮಿತಿಯನ್ನು ರಚಿಸಿ, ಕೆಳಕಂಡವರನ್ನು ಅಧಿಕಾರವರ್ಗಕ್ಕೆ ಆಯ್ಕೆ ಮಾಡಲಾಯಿತು. ಅಧ್ಯಕ್ಷರು: ಎನ್. ಬಿ. ತಿಪ್ಪೇಸ್ವಾಮಿ, ಉಪಾಧ್ಯಕ್ಷರು : ಎಂ. ಪರಮೇಶ್ವರಪ್ಪ, ಕಾರ್ಯದರ್ಶಿ : ಬಿ. ನಟರಾಜ್ ಹಾಗೂ ಸಂಘಟನಾ ಕಾರ್ಯದರ್ಶಿ : ಜಿ. ಎನ್. ಮಲ್ಲಿಕಾರ್ಜುನ. ಆರು ಜನರ ಕಾರ್ಯಕಾರಿ ಸಮಿತಿಯನ್ನು ಸಹಾ ಇದೇ ಸಂದರ್ಭದಲ್ಲಿ ರಚಿಸಲಾಯಿತು.

ಇದರೊಂದಿಗೆ ಚಿತ್ರದುರ್ಗಜಿಲ್ಲೆಯಲ್ಲಿ ಎಸ್. ಎಫ್. ಐ. ಯನ್ನು ಮೂರು ತಾಲ್ಲೂಕುಗಳಿಗೆ ವಿಸ್ತರಿಸಿದಂತಾಯಿತು. ●

### ತಿತಿಮತಿ ಹೋರಾಟಕ್ಕೆ ಬೆಂಬಲ

[2ನೇ ಪುಟದಿಂದ]

ಜೀವಿಗಳು ಆರ್ಥಿಕ ಸಹಾಯ ನೀಡಿರುವರು. ಪ್ಲಾಂಟೇಷನ್ ಕಾರ್ಮಿಕರು ಮತ್ತು ಜನಸಾಮಾನ್ಯರು ತಿತಿಮತಿ ರೈತರ ಧೀರ ಹೋರಾಟಕ್ಕೆ ಎಲ್ಲಾ ರೀತಿಯಲ್ಲೂ ಬೆಂಬಲವೀಯುತ್ತಲಿರುವರು. ತಿತಿಮತಿಯ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲವನ್ನು ಕೊಟ್ಟು, ರೈತರಿಗೆ ನ್ಯಾಯ ಸಿಗುವಂತಾಗಬೇಕು.

17-4-79 ರಂದು ಬೆಂಗಳೂರಲ್ಲಿ ಸೇರುವ ಪ್ರಾಂತ ರೈತಸಂಘದ ಸಭೆಯಲ್ಲಿ ತಿತಿಮತಿಯ ರೈತರ ಹೋರಾಟಕ್ಕೆ ಬೆಂಬಲವಿತ್ತು, ರಾಜ್ಯದಾದ್ಯಂತ ಚಳುವಳಿಯನ್ನು ಸಂಘಟಿಸುವ ಬಗ್ಗೆಯೂ ಚರ್ಚಿಸಿ ತೀರ್ಮಾನಿಸಲಾಗುವುದು. —

### ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ

## ದ. ಕನ್ನಡ ಜಿಲ್ಲಾ ದಲಿತ ಯುವಕ ಸಮ್ಮೇಳನ

ದ. ಕ. ಜಿಲ್ಲಾ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಜಿಲ್ಲಾ ದಲಿತ ಯುವಜನರ ಸಮ್ಮೇಳನವು 18-3-79 ರಂದು ಸುಳ್ಯದಲ್ಲಿ ಜರುಗಿತು. ಸಮ್ಮೇಳನದಲ್ಲಿ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಶ್ರೀ. ಬಿ. ರಾಮಕೃಷ್ಣ, ದಲಿತ ಕವಿ ಶ್ರೀ. ದೇವನೂರು ಮಹಾದೇವ, ಶ್ರೀ. ಎಚ್. ಗೋವಿಂದಯ್ಯ, ಶ್ರೀ. ರಾಮಯ್ಯ ಕೋಲಾರ, ಶ್ರೀ. ಎಂ. ಡಿ. ಗಂಗಯ್ಯ, ಪಂಚಮ 'ಪತ್ರಿಕೆ' ಸಂಪಾದಕ ಶ್ರೀ. ರಾಮದೇವರಾಕೆ, ಶ್ರೀಮತಿ. ಸೀತಾ, ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ ಶ್ರೀ. ಬಿ. ಕೃಷ್ಣಪ್ಪ, ತುಮಕೂರಿನ ಶ್ರೀ. ವೆಂಕಟೇಶ್, ಧಾರವಾಡದ ಶ್ರೀ. ವಿಜಯಪಾಟೀಲ್, ಹಾಸನದ ಚಂದ್ರಪ್ರಸಾದತ್ಯಾಗಿ, ಸುಳ್ಯದ ಕಾರ್ಮಿಕ ಮುಂದಾಳು ಶ್ರೀ. ಸೂರ್ಯನಾರಾಯಣ ಭಟ್, ದಲಿತ ಹಿತೈಷಿಗಳಾದ ಶ್ರೀ. ಸುಬ್ರಾಯ ಚೊಕ್ಕಾಡಿ, ಶ್ರೀ. ರಾಮಚಂದ್ರ ಉಡುಪ, ಶ್ರೀ .ಜಿ.ಎಸ್. ಉಬರಡ್ಕ, ಶ್ರೀ. ಸಥ್ಯನ್ ದೇರಾಜೆ ಮೊದಲಾದವರು ಭಾಗವಹಿಸಿದ್ದರು. ದಲಿತರ ಸಮಸ್ಯೆ ಪರಿಹಾರಕ್ಕಾಗಿ ಮತ್ತು ವಿಮೋಚನೆಗಾಗಿ ದಲಿತರ ಬಲಿಷ್ಟ ಸಂಘಟನೆ ಮತ್ತು ಚಳುವಳಿಯನ್ನು ಬೆಳೆಸಲು ದಲಿತರ ಮುಂದಾಳುಗಳು ಕರೆಯಿತ್ತರು. ಸಂಜೆ ಬಹಿರಂಗ ಅಧಿವೇಶನವೂ ನಡೆಯಿತು. ಕುಮಾರಿ ಸರಸ್ವತಿಯವರ ಮತ್ತು ತುಕಾರಾಂ ಮೈಸೂರು ಇವರುಗಳು ಕ್ರಾಂತಿಗೀತೆ ಹಾಡುವುದರೊಂದಿಗೆ ಸಮ್ಮೇಳನ ಪ್ರಾರಂಭವಾಗಿತ್ತು. ದಲಿತರ ಹೋರಾಟಕ್ಕೆ ಎಲ್ಲಾ ಪ್ರಗತಿಪರ ವ್ಯಕ್ತಿಗಳ ಮತ್ತು ಶಕ್ತಿಗಳ ಬೆಂಬಲ ಕೋರಲಾಯಿತು. ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯ್ತು.

1. ಕೃಷಿಕಾರ್ಮಿಕರಿಗೆ ಹೆಣ್ಣು ಗಂಡೆಂಬ ಬೇಧವಿಲ್ಲದೆ ಕನಿಷ್ಠ ರೂ. 8.00 ದೊರೆಯಬೇಕು.

2. ಕೇಂದ್ರ ಸರಕಾರದ ಮುಂಗಡ ಪತ್ರದಲ್ಲಿರುವ ಜನತೆಯ ಮೇಲಿರುವ ಕರಭಾರವನ್ನು ಹಿಂತೆಗೆಯಬೇಕು.

(8ನೇ ಪುಟನೋಡಿ)

### ಚುನಾವಣೆಯಲ್ಲಿ ಭಾರಿ ಜಯ

ಹರಿಹರದ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಹಕಾರ ಸಂಘದ ವಾರ್ಷಿಕ ಚುನಾವಣೆಯು 31-3-79 ರಂದು ನಡೆಯಿತು. ಇದರಲ್ಲಿ ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಕೋ ಆರ್ಡಿನೇಷನ್ ಕಮಿಟಿಯ ವತಿಯಿಂದ ಸ್ಪರ್ಧಿಸಿದ ಕಾಂ. ಹೆಚ್. ಬಸಪ್ಪ ಮತ್ತು ಕಾಂ. ಆರ್. ಹನುಮಂತಪ್ಪ ಇವರುಗಳು ಪ್ರಚಂಡ ಬಹುಮತದಿಂದ ಆಯ್ಕೆಯಾಗಿದ್ದಾರೆ. ಎರಡು ಸ್ಥಾನಗಳಿಗೆ (ಡೈರೆಕ್ಟರ್) ನಾಲ್ಕು ಮಂದಿ ಸ್ಪರ್ಧಿಸಿದ್ದು ಒಬ್ಬರು ಚುನಾವಣಾ ಕಣದಿಂದ ನಿವೃತ್ತರಾಗಿ, ಇನ್ನೊಬ್ಬ ಅಭ್ಯರ್ಥಿಗೆ ಬಲಕಮ್ಯುನಿಸ್ಟರು ಬೆಂಬಲ ಕೊಟ್ಟಿದ್ದರು. ಪ್ರಚಾರ ಪ್ರಕ್ಷೋಭೆ ಹೆಚ್ಚಿಗೆ ಇರದೆ, ಕೆಲಸಗಾರರು ಕೋ ಆರ್ಡಿನೇಷನ್ ಕಮಿಟಿಯ ಮೇಲೆ ದೃಢವಿಶ್ವಾಸವಿಟ್ಟಿರುವುದು ಬಲಕಮ್ಯುನಿಸ್ಟರಿಗೆ ಆತಂಕವಾದಂತಿದೆ.

## ಹರ್ಬರ್ಟ್ಸ್ ಇಂಡಿಯಾ ಕಾರ್ಮಿಕ ಸಭೆ

ಹರ್ಬರ್ಟ್ಸ್ ಇಂಡಿಯಾ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆಯು 26-3-79ರಂದು ಸಂಘದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆಯಲ್ಲಿ ಮುಂಗಡ ಪತ್ರವನ್ನು ಖಂಡಿಸಿ, ಅಭಾವವಸ್ತುಗಳನ್ನು ಒದಗಿಸಿ ಬಸ್‌ದರ ಇಳಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವ ನಿಲುವಳಿಯನ್ನು ಅಂಗೀಕರಿಸಲಾಯಿತು.

## ನಿಧನ

ಚಿಕ್ಕಮಗಳೂರು ಹಾಸನ ಡಿಸ್ಟ್ರಿಕ್ಟ್ ಸಾಮಿಲ್ಸ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್ನಿನ ಸದಸ್ಯರೂ ಹಾಸನದ ಕಾಫಿ ಕ್ಯೂರಿಂಗ್ ಕಾರ್ಮಿಕರ ಮುಂದಾಳುಗಳಲ್ಲೊಬ್ಬರೂ, ಹಾಸನದ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ನೌಕರರೂ ಆದ ಶ್ರೀ ಎಂ. ದಯಾನಂದ ಅವರು ಅಕಾಲ ನಿಧನರಾದರೆಂದು ತಿಳಿದು ಸಂಘದ ಪದಾಧಿಕಾರಿಗಳಿಗೆ ಅತೀವ ದುಃಖವುಂಟಾಗಿದೆ. ದಿವಂಗತರ ಕುಟುಂಬದ ಸದಸ್ಯರಿಗೂ ಮತ್ತು ಸಹೋದ್ಯೋಗಿಗಳಿಗೂ ಸಂಘದ ಪದಾಧಿಕಾರಿಗಳು ಸಂತಾಪವನ್ನು ಸೂಚಿಸುತ್ತಾರೆ.

ದಿವಂಗತ ಶ್ರೀ ದಯಾನಂದರವರು ಐಕ್ಯರಂಗ ಪತ್ರಿಕೆಯ ಓದುಗರಲ್ಲೊಬ್ಬರಾಗಿದ್ದರು.

## ಲೇಖಕರಲ್ಲಿ ವಿನಂತಿ

ಐಕ್ಯರಂಗಕ್ಕೆ ಲೇಖನಗಳನ್ನು ಕಳಿಸುವವರು ದಯವಿಟ್ಟು ಪುಟದ ಒಂದೇ ಮಗ್ಗುಲಲ್ಲಿ ಬರೆಯತಕ್ಕದ್ದು. ನಿರೂಪಣೆ ಸಂಕ್ಷಿಪ್ತವಾಗಿದ್ದು, ಅಕ್ಷರ ಸ್ಫುಟವಾಗಿದ್ದರೆ ಸಂತೋಷ.

ಸಂಪಾದಕ

## ಬಣಕಲ್‌ನಲ್ಲಿ ಪಿಕೆಟಿಂಗ್

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಣಕಲ್ಲಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ದರದ ಹೆಚ್ಚಳದ ವಿರುದ್ಧ ಏಪ್ರಿಲ್ ಒಂದರಂದು ಪಿಕೆಟಿಂಗ್ ನಡೆಯಿತು. ಅದರಲ್ಲಿ 21 ಜನ ಕಾರ್ಮಿಕರನ್ನು ಬಂಧಿಸಲಾಯಿತು.

ಏಪ್ರಿಲ್ 2ರಂದು ಮೂಡಿಗೆರೆಯಲ್ಲಿ ಸಿ.ಐ.ಟಿ.ಯು. ಸದಸ್ಯರು ಮತ್ತು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಜಂಟಿಯಾಗಿ ಬಸ್‌ದರ ಏರಿಕೆಯ ವಿರುದ್ಧ ಚಳುವಳಿ ನಡೆಸಿದರು.

ಹಾಸನ ಜಿಲ್ಲೆಯ ಭಾಗ್ಯಕ್ಕೊಮರದಲ್ಲಿಯೂ ಚಳುವಳಿ ನಡೆದು 37 ಮಂದಿ ಕಾರ್ಮಿಕರು ಬಂಧನಕ್ಕೊಳಗಾದರು.

ಕೆ. ಹೊಸಕೋಟೆಯ ಬಾಳ್ಳುಪೇಟೆಯಲ್ಲೂ ಪಿಕೆಟಿಂಗ್ ನಡೆಯಿತು. ಮೂಡಿಗೆರೆ ತಾಲ್ಲೂಕಿನ ಕಳಸದಲ್ಲೂ ಸಿ.ಐ.ಟಿ.ಯು. ಮತ್ತು ರೈತಸಂಘದ ಕಾರ್ಯಕರ್ತರು ಬಸ್‌ದರ ಹೆಚ್ಚಳವನ್ನು ಪ್ರತಿಭಟಿಸಿದರು. ●

## ಐಕ್ಯರಂಗ ವಿಶೇಷಾಂಕ

ಐಕ್ಯರಂಗ ಮೇ ವಿಶೇಷಾಂಕವನ್ನು 1979ನೇ ಇಸವಿ ಮೇ ತಿಂಗಳ ಮಧ್ಯದಲ್ಲಿ ಪ್ರಕಟಿಸಲಾಗುವುದು. ಮೇ ತಿಂಗಳ ಮೊದಲ ವಾರದ ಮತ್ತು ಎರಡನೇ ವಾರದ ಐಕ್ಯರಂಗ ಪತ್ರಿಕೆಗಳು ಸಂಯುಕ್ತವಾಗಿ ಮೇ ಮಧ್ಯದಲ್ಲಿ ಪ್ರಕಟವಾಗಲಿದೆ. ವಿಶೇಷಾಂಕದಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಿಚಾರಗಳ ಬಗ್ಗೆ ಅರ್ಥಪೂರ್ಣ ಲೇಖನಗಳನ್ನು ಪ್ರಕಟಿಸಲಾಗುವುದು. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಬಗ್ಗೆಯೂ ಲೇಖನಗಳು ಇರಲಿವೆ. ವಿಶೇಷಾಂಕದ ಬಿಡಿಪ್ರತಿಯ ಬೆಲೆ ಒಂದು ರೂಪಾಯಿ. ವಿಶೇಷಾಂಕ ಪ್ರತಿಗಳು ಎಷ್ಟುಬೇಕು ಎಂಬುದನ್ನು ನಮ್ಮ ಚಂದಾದಾರರು ಮತ್ತು ಏಜೆಂಟರುಗಳು ಏಪ್ರಿಲ್ 25ನೇ ತಾರೀಖಿನೊಳಗೆ ನಮಗೆ ತಿಳಿಸತಕ್ಕದ್ದು.

ಸಂಪಾದಕ
ಮತ್ತು
ವ್ಯವಸ್ಥಾಪಕ

### ಆಂಧ್ರ ಪ್ರದೇಶದಲ್ಲಿ

# ಭೂಮಿಗಾಗಿ ಹೋರಾಟ

**300 ಕೇಂದ್ರಗಳಲ್ಲಿ 70 ಸಾವಿರ ಕೃಷಿಕೂಲಿಗಾರರ ಭೂ ಆಕ್ರಮಣ, 100 ಕೇಂದ್ರಗಳಲ್ಲಿ 1 ಲಕ್ಷ ಜನರಿಂದ ಮನೆ ಸೈಟಿಗಾಗಿ ಪಿಕೆಟಿಂಗ್**

ಉಭಯ ಪಕ್ಷಗಳ ರೈತ ಸಂಘಗಳ ಹೇಳಿಕೆಯಂತೆ ಕಳೆದ ತಿಂಗಳು ಆಂಧ್ರ ಪ್ರದೇಶದ ನಾನಾಕಡೆ ಭೂ ಆಕ್ರಮಣ ಚಳುವಳಿ ನಡೆಸಿ ಅದ್ಭುತ ವಿಜಯವನ್ನು ಸಾಧಿಸಲಾಗಿದೆ. ರೈತರು, ಕೃಷಿ ಕೂಲಿಗಾರರು, ತಮ್ಮ ಪ್ರಾಣವನ್ನು ಪಣವಾಗಿ ಇಟ್ಟು, ಪೋಲೀಸರ ಗುಂಡಿಗೆ ಲಾಠಿಗಳಿಗೆ ಬೆದರದೆ ಮುನ್ನುಗ್ಗಿದ ಧೀರ ಹೋರಾಟ, ತೆಲಂಗಾಣ ಹೋರಾಟವನ್ನು ಮತ್ತೊಮ್ಮೆ ಸ್ಮರಣೆಗೆ ತಂದಿದೆ. ಇದರಲ್ಲಿ ಮುಖ್ಯವಾಗಿ ಸಿ. ಪಿ. ಐ. (ಎಂ)ನ ಹಿಡಿತದಲ್ಲಿರುವ ರೈತಸಂಘ ಮತ್ತು ಸಿ. ಪಿ. ಐ. ನ ರೈತ ಸಂಘಗಳು ಐಕ್ಯಕಾರ್ಯಾಚರಣೆಗೆ ಇಳಿದದ್ದು ಒಂದು ವಿಶೇಷವಾಗಿತ್ತು.

ಆಂಧ್ರದಲ್ಲೆಲ್ಲಾ 9 ದಿನಗಳು ಸತತವಾಗಿ ನಡೆದ ಹೋರಾಟದಲ್ಲಿ 300 ಕೇಂದ್ರಗಳಲ್ಲಿ 70 ಸಾವಿರ ಬಡ ವ್ಯವಸಾಯ ಕೃಷಿಕಾರ್ಮಿಕರು, ಭೂಹೀನರು, ಬಡರೈತರು ಪಾಲ್ಗೊಂಡಿದ್ದರು. ಹಾಗೂ 300 ಕೇಂದ್ರಗಳಲ್ಲಿ ಮನೆ ಸೈಟಿಗಾಗಿ ಒಂದು ಲಕ್ಷಜನ ಹರಿಜನ-ಗಿರಿಜನ ಕೃಷಿಕೂಲಿಗಾರರು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಧಿಕಾರಿಗಳ ಮುಂದೆ ಪಿಕೆಟಿಂಗ್ ನಡೆಸಿ ಹೋರಾಟವನ್ನು ಒಂದು ಮುಖ್ಯ ಹಂತಕ್ಕೇರಿಸಿದ್ದಾರೆ.

ಭೂ ಆಕ್ರಮಣದ ಸಂದರ್ಭದಲ್ಲಿ ಗುಂಡೇಟಿನಿಂದ ಮರಣ ಹೊಂದಿದ ನಲ್ಲೂರು ಜಿಲ್ಲೆ ಗಾಲಂಕಿ ತಿರುಪಾಲು (19) ಮತ್ತು ಗುಂಡೇಟಿನಿಂದ ಗಾಯಗೊಂಡು ಕೈಯನ್ನೇ ಕಳೆದುಕೊಂಡ ರಮಣಮ್ಮ ಹಾಗೂ ಸೋಮರಾಜು, ಪಲ್ಲೆಯಲ್ಲಿ ನಡೆದ ಗೋಲಿಬಾರಿನಿಂದ ಗಾಯಗೊಂಡು ಬಲಗೈಯನ್ನು ಕಳೆದುಕೊಂಡ ನರಸಯ್ಯ ಮೊದಲಾದವರಿಗೆ ಐಕ್ಯರಂಗವು ಸಂಪೂರ್ಣ ಅಭಿನಂದನೆಗಳನ್ನು ಅರ್ಪಿಸುತ್ತದೆ. ಹಾಗೆಯೇ ಆಂಧ್ರ ಪ್ರದೇಶದ ಬಡರೈತ ಕೃಷಿ ಕೂಲಿಗಾರರ ಹೋರಾಟ ಯಶಸ್ವಿಯಾಗಲೆಂದೂ, ಈ ಹೋರಾಟಕ್ಕೆ ನಮ್ಮ ರಾಜ್ಯದಾದ್ಯಂತ ಬೆಂಬಲವು ದೊರೆಯಲೆಂದು ಹಾರೈಸೋಣ. ●

## ರೈತರ ಸಭೆಗಳು

ಚಿತ್ರದುರ್ಗ ಜಿಲ್ಲಾ, ಚಳ್ಳಕೆರೆ ತಾಲ್ಲೂಕು, ಚೌಳೂರು ಗ್ರಾಮದಲ್ಲಿ ರೈತಸಂಘದ ಆಶ್ರಯದಲ್ಲಿ ತಾ. 5-4-79 ರಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸುಮಾರು ಐನೂರು ಜನ ನೆರೆದಿದ್ದ ಸಭೆಯಲ್ಲಿ ತುಮಕೂರು ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಚೆನ್ನಪ್ಪನವರು ರೈತರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ವಿವರಿಸಿ, ಇಂದಿನ ಪರಿಸ್ಥಿತಿಯಲ್ಲಿ ಬಲಿಷ್ಠ ರೈತಸಂಘವನ್ನು ಕಟ್ಟುವ ಅವಶ್ಯಕತೆಯ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಟ್ಟರು. ರಾಜ್ಯ ಎಸ್. ಎಫ್. ಐ. ಶಾಖೆಯ ಅಧ್ಯಕ್ಷರಾದ ಕಾಂ. ಇಕ್‌ಬಾಲ್ ಹುಸೇನ್ ಮಾತನಾಡುತ್ತಾ ದೇಶದಲ್ಲಿ ಒಂದು ಕಡೆ ಬಡತನ, ನಿರುದ್ಯೋಗ, ನಿರಕ್ಷರತೆ ಬೆಳೆಯುತ್ತಿದ್ದರೆ, ಆಳುವ ಪಕ್ಷದ ಶಾಸಕ-ಮಂತ್ರಿಗಳು ಕೇವಲ ತಮ್ಮ ಸಂಬಳ ಹಾಗೂ ಸಾರಿಗೆ ಭತ್ಯಗಳನ್ನು ಏರಿಸಿಕೊಂಡಿರುವುದನ್ನು ಟೀಕಿಸಿದರು. ಚಳ್ಳಕೆರೆ ತಾಲ್ಲೂಕು ರೈತಸಂಘದ ಮುಖಂಡರು ಹಾಗೂ ಜನಪ್ರಿಯ ವಕೀಲರಾದ ಕಾಂ. ಶಿವಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಸಣ್ಣವೀರಣ್ಣನವರು ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಅಹೋಬಲ ನಾಯಕರು ರೈತಸಂಘದ ಪರವಾಗಿ ಎಲ್ಲರಿಗೂ ವಂದಿಸಿದರು.

**ರೆಡ್ಡಿ ಹಳ್ಳಿಯಲ್ಲಿ ಸಭೆ**

ತಾ. 6-4-79 ರಂದು ಚಳ್ಳಕೆರೆ ತಾಲ್ಲೂಕು, ರೆಡ್ಡಿಹಳ್ಳಿಯಲ್ಲಿ ರೈತಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಗ್ರಾಮದ ಹಿರಿಯರಾದ ಮಲ್ಲಿಕಾರ್ಜುನಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ರೈತರ ಸಂಘಟನೆಯ ಮಹತ್ವದ ಬಗ್ಗೆ ಹಾಗೂ ರೈತರನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ಕಾಂ. ಚೆನ್ನಪ್ಪ, ಕಾಂ. ಇಕ್‌ಬಾಲ್ ಹುಸೇನ್ ಹಾಗೂ ಕಾಂ. ಶಿವಯ್ಯನವರು ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಟ್ಟರು. ಸಭೆ ಮುಗಿದಾಗ ರಾತ್ರಿ 12 ಗಂಟೆಯಾಗಿದ್ದರೂ, ಗ್ರಾಮಸ್ಥರೆಲ್ಲಾ ಉತ್ಸಾಹದಿಂದ ಕುಳಿತಿದ್ದುದು ಒಂದು ವೈಶಿಷ್ಟ್ಯ. —

### ದಲಿತ ಯುವಕ ಸಮ್ಮೇಳನ

(7ನೇ ಪುಟದಿಂದ)

3. ದಲಿತರ ಸ್ವಯಂ ರಕ್ಷಣೆಗಾಗಿ ಆಯುಧಗಳನ್ನು ಬಳಸಿಕೊಳ್ಳಲು ಅನುಮತಿ ಬೇಕು.

4. ಗೋಮಾಳ ಭೂಮಿಯ ವಿತರಣೆಯಲ್ಲಿ ಭೂಹೀನರಿಗೆ ಪ್ರಾಧಾನ್ಯತೆ ಯೀಯಬೇಕು.

5. ಕೊಡಗು ಜಿಲ್ಲೆಯ ತಿತಿಮತಿ ಪ್ರದೇಶದ ಬಡರೈತರಿಗೆ ಬೆಂಬಲ ಕೊಡಲಾಯ್ತು, ಬಡರೈತರಿಗೆ ಅವರು ಈಗ ಇರುವ ಜಾಗವನ್ನು ಖಾಯಂಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಯ್ತು.

6. ಹರಿಜನ, ಗಿರಿಜನ ವಿದ್ಯಾರ್ಥಿ ವೇತನವನ್ನು ರೂ. 70 ರಿಂದ ರೂ. 120ಕ್ಕೆ ಏರಿಸಬೇಕು.

7. ಹಿಂದುಳಿದ ವರ್ಗದ ನಿಲಯಕ್ಕೆ ಸಿಗುವ ಇತರ ಸವಲತ್ತು ಹರಿಜನ ಮತ್ತು ಗಿರಿಜನ ವರ್ಗದ ವಿದ್ಯಾರ್ಥಿ ನಿಲಯಗಳಿಗೂ ಸಿಗಬೇಕು.

ಸಮ್ಮೇಳನ, ಬಹಿರಂಗ ಅಧಿವೇಶನ ಗಳೆದ ಮೇಲೆ ರಾತ್ರಿ ಬಿ. ರಾಮಕೃಷ್ಣ ವಿರಚಿತ "ಕಲಿಯುಗ ಮಹಿಮೆ" ಎಂಬ ಯಕ್ಷಗಾನವನ್ನು ಪ್ರದರ್ಶಿಸಲಾಯ್ತು.

### ರಾಷ್ಟ್ರೀಯ ಸಮಾವೇಶ

[1ನೇ ಪುಟದಿಂದ]

ಮಾಲೀಕನಿಗೂ ಶಿಕ್ಷೆ ನೀಡಿಲ್ಲ ಎಂದು ಅವರು ಹೇಳಿದರು.

ಕಾಂ. ವಿಮಲಾರಣದಿವೆಯವರು ಮಹಿಳೆಯರ ಸ್ಥಿತಿಗತಿಗಳನ್ನು ಅಂಕಿ ಅಂಶಗಳ ಸಹಿತ ವಿವರಿಸುವ, ಹೋರಾಟದ ಅನಿವಾರ್ಯತೆಯನ್ನು ಒತ್ತಿ ಹೇಳುವ, 20 ಅಂಶಗಳ ಬೇಡಿಕೆಯನ್ನು ಹೊಂದಿದ್ದ ಸುದೀರ್ಘ ವರದಿಯೊಂದನ್ನು ಮಂಡಿಸಿದರು.

ಸಮ್ಮೇಳನದ ಎರಡನೇ ದಿನ ಕಾಂ. ಸುಶೀಲಾಗೋಪಾಲನ್ ಅವರು ಬೇಡಿಕೆಗಳ ಪಟ್ಟಿಯನ್ನು ಮಂಡಿಸಿದರು. ನಂತರ ಸುಮಾರು 25 ಪ್ರತಿನಿಧಿಗಳು ಬೇಡಿಕೆಗಳ ಸೂಕ್ತಾಸೂಕ್ತತೆಗಳನ್ನು ಕುರಿತು ಮಾತನಾಡಿದರು.

ಇರಾನ್‌ನಲ್ಲಿ ಬುರ್ಖಾಪದ್ಧತಿಯನ್ನು ಮತ್ತೆ ಹೇರುತ್ತಿರುವುದರ ವಿರುದ್ಧ ಗೊತ್ತುವಳಿಯನ್ನು ಮಂಡಿಸಿ, ಇರಾನ್‌ನ ಮಹಿಳೆಯರ ವೀರಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಸರ್ಕಾರ ಜಾರಿಗೆ ತರಲಿರುವ Education & Hospital Essential Service Billನ್ನು ವಿರೋಧಿಸಿ ಗೊತ್ತುವಳಿಯೊಂದನ್ನು ಮಂಡಿಸಲಾಯಿತು. ಇದನ್ನು ಇಡೀ ಸಭೆಯು ಅನುಮೋದಿಸಿತು.

ಅರ್ಹತಾ ಪರಿಶೀಲನಾ ಸಮಿತಿಯ ವರದಿಯನ್ನು ದೆಹಲಿಯ ಕಾಂ. ರಂಜನ ಅವರು ಮಂಡಿಸಿದರು.

ಸಮ್ಮೇಳನದಲ್ಲಿ 16 ರಾಜ್ಯಗಳ 440 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳದಿಂದ ಅಧಿಕ ಪ್ರತಿನಿಧಿಗಳು ಬಂದಿದ್ದರು. ಕರ್ನಾಟಕದಿಂದ 37 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಪ್ರತಿನಿಧಿಗಳಲ್ಲಿ 31 ಮಂದಿ ಅನಕ್ಷರಸ್ಥರು.

ಅಹಲ್ಯಾರಂಗಣೇಕರ್, ವಿಮಲಾ ರಣದಿವೆ ಮತ್ತು ಸುಶೀಲಾಗೋಪಾಲನ್ ಅವರ ನೇತೃತ್ವದಲ್ಲಿ ಎಲ್ಲ ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಲಾಯಿತು.

ಮೇ 30ರಂದು ರಾಷ್ಟ್ರಮಟ್ಟದಲ್ಲಿ ಬೇಡಿಕೆದಿನವನ್ನು ಆಚರಿಸಲು ಸಮ್ಮೇಳನ ನಿರ್ಧರಿಸಿತು.

ಸಮಾರೋಪ ಭಾಷಣ ಮಾಡಿದ ಅಹಲ್ಯಾರಂಗಣೇಕರ್ ಅವರು ಎಲ್ಲ ಕಾರ್ಮಿಕ ಸಂಘಗಳಿಗೂ ಎಲ್ಲ ಮಹಿಳಾ ಸಂಘಗಳಿಗೂ ಈ ಹೋರಾಟದೊಂದಿಗೆ ಒಂದಾಗಿ ದುಡಿಯುವ ಮಹಿಳೆಯ ಬೇಡಿಕೆ ದಿನವನ್ನು ಆಚರಿಸಲು ಕೋರಿದರು. ●

## ಉಪವಾಸ ಸತ್ಯಾಗ್ರಹ

ಶಿವಮೊಗ್ಗ ಜಿಲ್ಲಾ ಸರಕಾರಿ ಪ್ಲೀಡರು ಅವರು ವಿನಾಕಾರಣ ಕೇಸನ್ನು ಮುಂದೂಡುವುದರಿಂದ 25 ತಿಂಗಳುಗಳಿಂದ ಶ್ರೀ. ಬಿ. ವರದರಾವ್ ಅವರ ಕೇಸು ಕೋರ್ಟಿನಲ್ಲಿದ್ದು, ಇವರ ವೇತನ ದೊರೆಯದಂತಾಗಿದೆ. 11-4-79 ರಂದು ಮತ್ತೆ ವಾಯಿದೆ ಇದೆ. ಅಂದು ಸರಕಾರಿ ವಕೀಲರು ಮತ್ತೆ ಕೇಸನ್ನು ಮುಂದೆ ಹಾಕಲು ಕೋರಿದರೆ, ಅವರ ಕಛೇರಿ ಎದುರು 12-4-79 ರಿಂದ ಉಪವಾಸ ಸತ್ಯಾಗ್ರಹ ಹೂಡಲು ಶ್ರೀ. ಬಿ. ವರದರಾವ್ ಅವರುನಿರ್ಣಯಿಸಿದ್ದಾರೆ. ಎಲ್ಲಾ ಜನತೆಯ ಬೆಂಬಲವನ್ನು ಕೋರಿದ್ದಾರೆ.

## ಸಂಪಾದಕೀಯ

(ಒಂದನೇ ಪುಟದಿಂದ)

ರಿಗಳೂ, ದಳ್ಳಾಳಿ ಏಜೆಂಟರುಗಳೂ ಇವರಿಂದ ಜಾಗ ಕೊಡಿಸುವ ನೆಪದಲ್ಲಿ ಹಣ ವಸೂಲಿ ಮಾಡಿ ಲಾಭಪಡೆಯುವರು. ಕೊಳಚೆ ಪ್ರದೇಶಗಳಿಗೆ ದೊಡ್ಡ ದೊಡ್ಡ ಮುಖಂಡರುಗಳ ಹೆಸರನ್ನಿಟ್ಟು ನಾಮಕರಣ ಮಾಡುವುದು ಸರ್ವೇ ಸಾಮಾನ್ಯ.

ಕೊಳಚೆ ಪ್ರದೇಶದ ಬಡಜನರ ಜೀವನ ಎಷ್ಟು ಅಭದ್ರ ಎಂಬುದು ಇತ್ತೀಚೆಗೆ ಬೆಂಗಳೂರಿನ ಬನಶಂಕರಿ ಪ್ರದೇಶದಲ್ಲಿ ನಡೆದ ಅಮಾನುಷ ಘಟನೆಯಿಂದ ವಿದಿತವಾಗುವುದು. ಬನಶಂಕರಿಯಲ್ಲಿ ವಾಸವಾಗಿದ್ದ ಸುಮಾರು 480 ಬಡ ಜನರ ಮನೆಗಳಿರುವ ಜಾಗವನ್ನು ಸರಕಾರ "ಜಿಯಲಾಜಿಕಲ್" ಇಲಾಖೆಗೆ ಮಾರಿ, ಜಾಗವನ್ನು ಖಾಲಿ ಮಾಡುವುದಕ್ಕಾಗಿ ಎಲ್ಲಾ ಮನೆಗಳನ್ನು ನಾಶಮಾಡಿ ಸಾವಿರಾರು ಜನರನ್ನು ಬೀದಿಗೆ ಹಾಕುವಂತಾಯಿತು. ಬನಶಂಕರಿಯಲ್ಲಿ ಕಾಂಗ್ರೆಸ್ (ಐ) ಶಾಸಕರೂ, ಕೆಲವು ರಾಜಕೀಯ ಪುಡಾರಿಗಳೂ ಪ್ರತಿ ಒಂದು ಬಡ ಕುಟುಂಬದಿಂದ ಭೂಮಿ ಕೊಡಿಸುವ ನೆಪದಲ್ಲಿ ರೂ. 51ರಂತೆ ವಸೂಲಿ ಮಾಡಿರುವರಂತೆ. ಇದು ಎಲ್ಲಾ ಕಡೆ ನಡೆದಿರುವ ವಿಷಯ. ಸಮಾಜವಾದದ ಬಗ್ಗೆ ಭಾಷಣ ಬಿಗಿಯುವ ಶ್ರೀ ದೇವರಾಜಅರಸ್ ಅವರ ಸರಕಾರ, ಕನಿಷ್ಟ ಈ ಬಡ ಜನರಿಗೆ ಬೇರೆ ವಾಸಸ್ಥಳದ ವ್ಯವಸ್ಥೆ ಮಾಡದೆ ಅಮಾನುಷವಾಗಿ ವರ್ತಿಸಿದ್ದು ಖಂಡನೀಯ. ಬನಶಂಕರಿಯಲ್ಲಿ ಸರಕಾರ ನಡೆಸಿದ ದಬ್ಬಾಳಿಕೆಯು ತುರ್ತುಪರಿಸ್ಥಿತಿ ಸಮಯದಲ್ಲಿ ನಡೆದ "ತುರ್ಕುಮನ್" ಗೇಟಿನ ಘಟನೆಯಂತಿದೆ. ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡುವುದು ರಾಜ್ಯ ಸರಕಾರದ ಪ್ರಕಾರ "ಅಲ್ಲಿರುವ ಜನತೆಯನ್ನು ಬೀದಿಗೆಸೆಯುವುದಾಗಿದೆ".

ಸರಕಾರವು ಈ ರೀತಿ ಮಾಡಿದ್ದಾದರೆ, ವಿಧಾನ ಸಭೆಯಲ್ಲಿ ವಿರೋಧ ಪಕ್ಷದವರಿಗೂ ಎಚ್ಚರವಾದದ್ದು ಮನೆಗಳು ನಾಶವಾಗಿ, ಜನರು ಬೀದಿಪಾಲಾದ ಮೇಲೆ. ವಿಧಾನಸಭೆಯಲ್ಲಿ ಸ್ವಲ್ಪ ಗದ್ದಲವಾಗಿ, ಈಗೊಂದು ಸಮಿತಿಯನ್ನು ಮಾಡಿರುವ ವರದಿಯಾಗಿದೆ. ಆದರೆ ಬನಶಂಕರಿಯ ಬಡಜನತೆ ಬೀದಿಪಾಲಾಗಿದೆ.

ಈಗಲಾದರೂ ಈ ಜನತೆಯ ಬಗ್ಗೆ ಕಳಕಳಿಯಿರುವವರೆಲ್ಲಾ ಸೇರಿ ಕೊಳಚೆ ಪ್ರದೇಶದ ಬಡಜನತೆಯ ನ್ಯಾಯಕ್ಕಾಗಿಯೂ ಮತ್ತು ಕೊಳಚೆ ಪ್ರದೇಶದ ವಾಸದ ವ್ಯವಸ್ಥೆಯನ್ನು ಉತ್ತಮಗೊಳಿಸುವುದಕ್ಕಾಗಿಯೂ ಹೋರಾಡುವುದು ಅವಶ್ಯ. ಬನಶಂಕರಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿರುವುದು ಪ್ರಶಂಸನೀಯ. ●

## ಪರಿಸರ

ಶ್ರೀಮಂತ ಉದ್ಯಮಿಗಾರಿಕೋದ್ಯಮಿಗಳು ಕಟ್ಟಿಸುವ ಶಾಲೆಗಳು, ದೇವಸ್ಥಾನಗಳು ಅವರ ಉತ್ಪನ್ನಗಳಿಗೆ ಉತ್ತಮ ಜಾಹಿರಾತು ಮಾಡುವ ಮಾದರಿಯಲ್ಲಿ ನಿರ್ಮಾಣವಾಗುತ್ತಿವೆ.

**—ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ**

ಇಂಡಿಯಾ ದೇಶದಲ್ಲಿ ರಾಜಕೀಯವು ಶ್ರಮವಿಲ್ಲದ ಒಂದು ವ್ಯಾಪಾರವಾಗಿಬಿಟ್ಟಿದೆ.

**—'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' ಯಲ್ಲಿ ರೊಮೇಶ್ ಥಾಪೂರ್.**

ಎಲ್ಲ ವಿಧದ ಮರಣದಂಡನೆಯನ್ನು ನಾನು ವಿರೋಧಿಸುತ್ತೇನೆ. ನಾಗರಿಕ ಸಮಾಜ ಇನ್ನಾದರೂ ಈ ರೀತಿಯ ಕೊಲೆಯನ್ನು ತಡೆಗಟ್ಟಲಿ.

**—ಭುಟ್ಟೋಗೆ ಗಲ್ಲಿಗೇರಿಸಿದರ ಬಗ್ಗೆ ಮಾತನಾಡುತ್ತಾ ಆಚಾರ್ಯ ಕೃಪಲಾನಿ.**

ಅಧಿಕಾರ ದುರುಪಯೋಗಪಡಿಸಿದರೆ ಇದೇ ರೀತಿಯ ಪರಿಣಾಮ ಎದುರಿಸಲು ಸಿದ್ಧರಾಗಬೇಕಾಗುತ್ತದೆ. ಇದು ರಾಜಕಾರಣಿಗಳಿಗೊಂದು ಚಿರಸ್ಮರಣೀಯ ಪಾಠ.

—ಭುಟ್ಟೋನನ್ನು ಗಲ್ಲಿಗೇರಿಸಿದ ಬಗ್ಗೆ ಟೊರೊಂಟೊದಲ್ಲಿನ **ಕೆನಡಾದ ಪಾಕೀಸ್ತಾನಿ ಅಸೋಸಿಯೇಶನ್ ಹೇಳಿಕೆ.**

ನಮ್ಮ ಬಡಜನರಲ್ಲಿರುವ ತಾಳ್ಮೆಯು ಅವರ ಬಡತನಕ್ಕೆ ಒಂದು ಪ್ರಮುಖ ಕಾರಣವಾಗಿದೆ.

**—ಜಾರ್ಜ್ ಫರ್ನಾಂಡೀಸ್**

ಪ್ರತೀ ಗುರುವಾರ ಅಲ್ಲಿ (ಮಂಗಳೂರಿನ ನೆಲ್ಲಿಕಾಯಿಮಠದ ರಾಘವೇಂದ್ರಸ್ವಾಮಿ ದೇವಸ್ಥಾನ) ಸುಮಾರು 2000 ಮಂಗಳಾರತಿ ನಡೆಯುತ್ತಿದ್ದು ಆರತಿಯೊಂದಕ್ಕೆ 50 ಪೈಸೆಯಂತೆ ಶುಲ್ಕ ವಿಧಿಸಲಾಗುತ್ತದೆ. ಆರತಿಯನ್ನು ಹಚ್ಚಿ ಒಮ್ಮೆ ಬೆಳಗಿದ ನಂತರ ಆರಿಸಿ ಮತ್ತೊಮ್ಮೆ ಎಂಟಾಣೆಗೆ ಅದೇ ಬತ್ತಿಯನ್ನು ಹಚ್ಚಿ ಆರತಿ ಬೆಳಗಿಸುವುದು ನೆಲ್ಲಿಕಾಯಿಮಠದ ವಿಶಿಷ್ಟ ಸಂಪ್ರದಾಯ.

**—ಆಶಾವಾದಿ**
ಮಂಗಳೂರು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 052.